ಅಖಿಲ ಕರ್ನಾಟಕ


# ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2021 ಮಾಸ ಪತ್ರಿಕೆ

ಸಂಪುಟ/Volume : 43
ಸಂಚಿಕೆ/Issue : 12
ಪುಟ/Pages : 16
ಬೆಲೆ/Price : ₹ 10/–

**Akhila Karnataka Shikshaka Samachar | September 2021 | Monthly**

## ಕರ್ಮಯೋಗಿ ಕೃಷ್ಣಮೂರ್ತಿ




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

### ಗಗನ(ಜಿ) ಸುಮ(ಎಸ್) ಕೃಷ್ಣಮೂರ್ತಿ(ಕೆ) – ಜಿ.ಎಸ್.ಕೆ

ಯಾವುದೋ ಒಂದು ಕೆಲಸ ಮಾಡುವುದು ಸಾಧ್ಯವೇ ಇಲ್ಲ ಎಂದಾದಾಗ ಅದನ್ನು ಸಹಜವಾಗಿ "ಗಗನ ಕುಸುಮ" ಎನ್ನುತ್ತೇವೆ. ಅಂದರೆ ಆಕಾಶದಲ್ಲಿ ಇರುವ ಹೂವು, ಅದನ್ನು ಮುಟ್ಟಲು ಸಾಧ್ಯವಿಲ್ಲ ಎಂದು ಇದರ ಅರ್ಥ. ಆದರೆ ನಿಜವಾಗಿಯೂ ಆಕಾಶದಲ್ಲಿ ಇಂಥ ಹೂವುಗಳು ಇವೆಯೇ ಎಂದರೆ ಅದಕ್ಕೆ ಉತ್ತರ 'ಹೌದು'. ಏಕೆಂದರೆ ಬ್ರೆಜಿಲ್ ದೇಶದ ಗಡಿ ಭಾಗದಲ್ಲಿ ಗಗನಚುಂಬಿ ಪರ್ವತವೊಂದಿದ್ದು, ಇದು ಸಮುದ್ರ ಮಟ್ಟದಿಂದ ಸುಮಾರು ೯೦೦ ಅಡಿ ಎತ್ತರದಲ್ಲಿದೆ. ಭೂಮಿಯ ಬೇರೆ ಯಾವ ಭಾಗಗಳಲ್ಲಿಯೂ ಕಂಡು ಕೇಳರದ ಅಪರೂಪದ ಹೂವುಗಳು ಇಲ್ಲಿವೆಯಂತೆ. ಗಗನ ಸುಮವೆಂದರೆ ಕೈಗೆ ನಿಲಕದ್ದು ಎಂಬ ಅರ್ಥವೂ ಉಂಟು. ಆದರೆ ಇವರು ನಮ್ಮ ಬಳಿಯೇ ಇದ್ದು ಎತ್ತರದ ಸ್ಥಾನದಲ್ಲಿದ್ದ, ನಮ್ಮ ಸಂಘಟನೆಯ ಗಗನ ಸುಮ ಕೃಷ್ಣಮೂರ್ತಿ ಸರ್(ಜಿ.ಎಸ್.ಕೆ)ರವರು ಎಂದರೆ ಅತಿಶಯೋಕ್ತಿಯಾಗಲಾರದು. ನಮ್ಮೆಲ್ಲರ ಹತ್ತಿರದಲ್ಲಿದ್ದರೂ ಅವರ ಎಲ್ಲಾ ಗುಣಗಳನ್ನು ನಾವೆಲ್ಲರೂ ತಿಳಿದುಕೊಂಡಿರಲ್ಲ. ಇಂದು ಶಿಕ್ಷಕ ಸಮಾಚಾರದ ತಂಡ ಅವರಿಗೆ ನುಡಿನಮನ ತಿಳಿಸಲು ಅವಕಾಶ ನೀಡಿದಾಗ, ಎಲ್ಲರೂ ಅವರ ಬಗ್ಗೆ ಬರೆದಿರುವ ಲೇಖನಗಳನ್ನು ನೋಡಿದರೆ ಜಿ.ಎಸ್.ಕೆ ಸರ್‌ರವರು ಇಷ್ಟೆಲ್ಲಾ ಗುಣಗಳ ಗಣಿಯಾಗಿದ್ದರೆ ಎಂದೆನಿಸದೇ ಇರದು. ಯಾರ ಬಳಿಯೂ ಇರದ ಗುಣಗಳ ಸಂಪತ್ತೇ ಆಗಿದ್ದರು ಜಿ.ಎಸ್.ಕೆ ಸರ್. ತಮ್ಮ ಇಡೀ ಜೀವನವನ್ನು ಸಮಾಜದೇವತೆಗೆ ಅರ್ಪಿಸಿದ ವ್ಯಕ್ತಿ ಎಂದರೆ ತಪ್ಪಾಗಲಾರದು.

ಎಲ್ಲರಿಗಿಂತ ಎತ್ತರದ ಗುಣವಂತಿಕೆ, ಮಾತಿನಲ್ಲಿಯೂ ಮಿತವ್ಯಯಿ, ಎಲ್ಲವನ್ನೂ ಸೂಕ್ಷ್ಮವಾಗಿ ವೀಕ್ಷಿಸಬಲ್ಲ ಚತುರರು ಅವರು. ಎಂದಿಗೂ ಕಾರ್ಯಕ್ರಮಗಳಲ್ಲಿ ವೇದಿಕೆಯ ಮೇಲೆ ಕೂಡದೇ, ಹಿಂದೆ ಕುಳಿತು ಎಲ್ಲಾ ಕಾರ್ಯಕ್ರಮಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದವರು. ಪ್ರತಿಯೊಂದು ವಿಷಯದಲ್ಲೂ ಮಾತನಾಡದೇ ಅವಶ್ಯಕವಾದಾಗ, ಅನಿವಾರ್ಯವಾದಾಗ ಮಾತ್ರ ಅತ್ಯಮೂಲ್ಯ ಸಲಹೆಗಳನ್ನು ನೀಡುತ್ತಿದ್ದ ಸಂಘಟನೆಯ ಮುಖ್ಯ ಸ್ತಂಭವಾಗಿದ್ದವರು ಇವರು.

ಅನೇಕ ವರ್ಷಗಳವರೆಗೆ ಶಿಕ್ಷಕ ಸಮಾಚಾರವನ್ನು ಮುನ್ನೆಡೆಸಿದ್ದ ಅವರು ಇಂದಿಗೂ ಅನೇಕ ಅಮೂಲ್ಯ ಸಲಹೆಗಳನ್ನು ನೀಡುವುದರೊಂದಿಗೆ ಶಿಕ್ಷಕ ಸಮಾಚಾರದ ಪೋಷಕರಾಗಿದ್ದರು. ಏನಾದರೂ ಸಮಸ್ಯೆಗಳು ಬಂದಾಗ ಅವರಿಗೆ ಕರೆ ಮಾಡಿದರೆ, ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಹೇಳುತ್ತಾ, ಏನೂ ಆಗಲ್ಲ, ಹೀಗೆಯೇ ಮಾಡಮ್ಮ ಎಂದು ಧೈರ್ಯ ತುಂಬುತ್ತಿದ್ದ ತಂದೆಯ ಸಮಾನರು.

ಇಡೀ ಸಮಾಜವನ್ನೇ ತಮ್ಮ ಪರಿವಾರವನ್ನಾಗಿ ಮಾಡಿಕೊಳ್ಳಲೆಂದೇ ಅವರು ಬ್ರಹ್ಮಚಾರಿಯಾಗಿದ್ದರು ಎಂದೆನಿಸುತ್ತದೆ. ರಾಜ್ಯದ ಯಾವುದೇ ಭಾಗದಿಂದ ಯಾವೊಬ್ಬ ಕಾರ್ಯಕರ್ತರು ಕಛೇರಿಗೆ ಬಂದರೆಂದರೆ ಮನೆಯ ಹಿರಿಯರನ್ನೇ ನೋಡಿದಷ್ಟು ಸಂತೋಷವಾಗುವಷ್ಟರ ಮಟ್ಟಿಗೆ ಇರುತ್ತಿತ್ತು ಅವರ ಕುಶಲೋಪಚಾರ. ಇಂತಹ ಮಹಾನ್ ಚೇತನವನ್ನು ಕಳೆದುಕೊಂಡ ಸಂಘಟನೆಗೆ ಅನಾಥಪ್ರಜ್ಞೆ ಕಾಡುತ್ತಿದೆ.

ಶರಣರ ಗುಣವನ್ನು ಮರಣದಲ್ಲಿ ಕಾಣು ಎಂಬಂತೆ ಇಂದು ಕೃಷ್ಣಮೂರ್ತಿ ಸರ್ ರವರು ತಮ್ಮ ಒಳ್ಳೆಯ ಗುಣಗಳಿಂದಲೇ ತಮ್ಮ ಇಳ ವಯಸ್ಸಿನಲ್ಲಿ ಯಾರಿಗೂ ಭಾರವಾಗದೇ, ಎಲ್ಲರ ಜೊತೆ ಮಾತನಾಡುತ್ತಲೇ ತಮ್ಮ ಪ್ರಾಣವನ್ನು ನಿರಾಯಾಸವಾಗಿ ಬಿಟ್ಟಿದ್ದಾರೆ. ಇಂದು ಅವರನ್ನು ಹೊಗಳದೇ ಇರುವ ಕಾರ್ಯಕರ್ತನೇ ಯಾರು ಇಲ್ಲವೆಂದು ಹೇಳಬಹುದು. ಅಂತಹ ನಿಗರ್ವಿ, ಹೃದಯವಂತ, ಶ್ರೇಷ್ಠ, ಜ್ಯೇಷ್ಠ, ಸರಳ ಸಜ್ಜನ, ಸ್ನೇಹಮಯಿ, ವಾತ್ಸಲ್ಯಮಯಿ, ಅಂತಃಕರಣಿ ವ್ಯಕ್ತಿತ್ವದ ಕೃಷ್ಣಮೂರ್ತಿ ಸರ್‌ರವರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲೆಂದು ಬೇಡುತ್ತೇನೆ.

– – – – –

ಶಿಕ್ಷಕ ಸಮಾಚಾರ ತಂಡವು ಈ ತಿಂಗಳ ಸಂಚಿಕೆ ಜಿ.ಎಸ್.ಕೆ ಸರ್ ನುಡಿನಮನಕ್ಕೆ ಅರ್ಪಿತವಾಗಲೆಂದು ತೀರ್ಮಾನಿಸಿ, ನುಡಿನಮನ ಬರೆಯಲು ಅವಕಾಶ ನೀಡಿತ್ತು. ನಮ್ಮ ಕರೆಗೆ ಓಗೊಟ್ಟು ಜಿ.ಎಸ್.ಕೆ ಸರ್ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡ ಎಲ್ಲಾ ಸಹೃದಯರಿಗೂ ಶಿಕ್ಷಕ ಸಮಾಚಾರದ ತಂಡದಿಂದ ಧನ್ಯವಾದಗಳು.

ಸಂಪಾದಕ

## ಪರಿವಿಡಿ


- ನಮಗೆ ಮೇಲ್ಪಂಕ್ತಿ ಹಾಕಿದ್ದ ಶ್ರೀ ಜಿಎಸ್‌ಕೆ 3
- ಕೃಷ್ಣಮೂರ್ತಿ ಇನ್ನು ನೆನಪು ಮಾತ್ರ 4
- ಸಂಘಟನೆಯ ಸಾಕ್ಷಿಪ್ರಜ್ಞೆಯಾಗಿದ್ದ ಜಿ.ಎಸ್.ಕೆ. 5
- ದೇಶಭಕ್ತ ಕಾರ್ಯಕರ್ತ–ಜಿಎಸ್‌ಕೆ 5
- ಸಂಘನಿಷ್ಠೆಯ ಪ್ರತಿರೂಪ ಕೃಷ್ಣಮೂರ್ತಿ 6
- ಸ್ಥಿತಪ್ರಜ್ಞ ಜಿ. ಎಸ್. ಕೃಷ್ಣಮೂರ್ತಿ 7
- ನಾನು ಕಂಡ ಜಿ.ಎಸ್. ಕೃಷ್ಣಮೂರ್ತಿಜಿ 7
- ನಾವೂ ಹೀಗಾಗಬಹುದೇ? 8
- ನನ್ನ ಪೂಜ್ಯ ತೀರ್ಥರೂಪರು 9
- ಮಿತಭಾಷಿ –ಜಿಎಸ್‌ಕೆ 9
- ಮರೆಯಲಾಗದ ಮಾಣಿಕ್ಯ 10
- ಹೀಗಿದ್ದರು ನಮ್ಮ ಜಿಎಸ್‌ಕೆ 11
- ಜಿ. ಎಸ್. ಕೆ. ನೆನಪು 11
- ನಾ ಕಂಡ ಕೃಷ್ಣಮೂರ್ತಿ (ಚಿಕ್ಕಪ್ಪ) 12
- ನನ್ನ ಪ್ರಿಯ ಸಹೋದರ ಕೃಷ್ಣ 12
- ಸಾರ್ಥಕ ಜೀವಿ 13
- ಮರೆಯಲಾರದ ಮಾಣಿಕ್ಯ ಜಿ. ಎಸ್. ಕೆ. ಜೀ (ಕವನ) 13
- ಸಹೃದಯ ಮಾರ್ಗದರ್ಶಕ ಮಿತ್ರ 13
- ವಿದ್ಯಾರ್ಥಿ ಜ್ಞಾನ ಮಿತ್ರ 14
- ಕೃಷ್ಣಮೂರ್ತಿಯವರು ಒಬ್ಬ ತಪಸ್ವಿ 15
- ಕ.ರಾ.ಮಾ.ಶಿ.ಸಂಘದ ಆಧಾರಸ್ತಂಭ 15
- ಕರ್ಮಯೋಗಿ 15
- ತಿಳಿಹೇಳುವ ಹಿರಿಯ ಮುತ್ಸದ್ದಿಯಾಗಿದ್ದರು ಜಿಎಸ್‌ಕೆ 15
- ಎಲೆ ಮರೆ ಕಾಯಿ–ಕೃಷ್ಣಮೂರ್ತಿ ಸರ್ 15

# ನಮಗೆ ಮೇಲ್ಪಂಕ್ತಿ ಹಾಕಿದ್ದ ಶ್ರೀ ಜಿಎಸ್‌ಕೆ

■ **ಶ್ರೀ ಕೃ. ನರಹರಿ**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಶ್ರೀಯುತ ಜಿ.ಎಸ್ ಕೃಷ್ಣಮೂರ್ತಿಯವರು ನನಗೆ 1986ರಲ್ಲಿ ಕರ್ನಾಟಕದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತಮಟ್ಟದ ಕಾರ್ಯಕರ್ತರಾಗಿದ್ದ ಶ್ರೀ ಪಿ.ಆರ್.ಆನಂದರಾವ್‌ರ ಮೂಲಕ ಪರಿಚಿತರಾದರು. ಶ್ರೀ ಕೃಷ್ಣಮೂರ್ತಿಯವರು ಹೆಚ್.ಎ.ಎಲ್ ಪ್ರೌಢಶಾಲೆಯಲ್ಲಿ ಗಣಿತ ಶಿಕ್ಷಕರಾಗಿ ಉದ್ಯೋಗ ನಿರ್ವಹಿಸುತ್ತಿದ್ದರು. ಆದ್ದರಿಂದ ಅವರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ಜೋಡಿಸುವ ಆಲೋಚನೆ ನನ್ನ ಮನಸ್ಸಿಗೆ ಬಂದಿತು. ಕೃಷ್ಣಮೂರ್ತಿಯವರನ್ನು ಜಿಎಸ್‌ಕೆ ಎಂದೇ ಅನೇಕರು ಗುರುತಿಸುತ್ತಿದ್ದರು. ಶಿಕ್ಷಕರಾದವರು, ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರಜ್ಞೆ, ಕರ್ತವ್ಯಪ್ರಜ್ಞೆ, ಬದ್ಧತೆ ಇತ್ಯಾದಿ ಗುಣಗಳನ್ನು ಮೂಡಿಸುವ ದೃಷ್ಟಿಯಿಂದ ನಮ್ಮ ಶಿಕ್ಷಕ ಸಂಘಟನೆಯು ಕೆಲಸ ಮಾಡುತ್ತಿದೆ, ಇದು ಕೇವಲ ಟ್ರೇಡ್ ಯೂನಿಯನ್ ಕೆಲಸ ಮಾತ್ರ ಮಾಡುತ್ತಿಲ್ಲ ಎಂದು ನಾನು ಶ್ರೀ ಜಿಎಸ್‌ಕೆಯವರಿಗೆ ವಿವರಣೆ ಕೊಟ್ಟಾಗ ಅವರು ಆ ದಿನವೇ ಶಿಕ್ಷಕ ಸಂಘದ ಕಾರ್ಯಕರ್ತರಾಗಿಬಿಟ್ಟರು. ಪ್ರಾಯಶಃ ಅವರ ಮನಸ್ಸಿನಲ್ಲಿ ತುಡಿಯುತ್ತಿದ್ದ ಅಂಶಗಳನ್ನೇ ಶಿಕ್ಷಕ ಸಂಘ ನಿರ್ಮಾಣ ಮಾಡುತ್ತಿರುವುದು ಅವರಿಗೆ ಒಂದು ವೇದಿಕೆಯನ್ನು ನಿರ್ಮಿಸಿಕೊಟ್ಟಂತಾಯಿತು ಎಂದೆನಿಸುತ್ತದೆ. ಶಾಲೆಯಲ್ಲಿ ಬಹಳ ಜವಾಬ್ದಾರಿಯುತ, ಶಿಸ್ತುಬದ್ಧ, ಶಿಕ್ಷಕ ವೃತ್ತಿಗೆ ಅರ್ಪಿಸಿಕೊಂಡಿದ್ದ ಅವರ ಬಗ್ಗೆ ಶಾಲೆಯ ಹಾಗೂ ಸುತ್ತಮುತ್ತಲಿನ ಶಾಲೆಗಳ ಶಿಕ್ಷಕರು ಮತ್ತು ಆಡಳಿತ ಮಂಡಲಿಗಳಿಗೆ ವಿಶೇಷ ಗೌರವ ಇತ್ತು. ಅವರ ಶಾಲೆಯಲ್ಲಿ ವಿದ್ಯಾರ್ಥಿಗಳ ಅಶಿಸ್ತಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಬಗೆಹರಿಸಲು ಅವರ ನೆರವು ಅಗತ್ಯವಾಗಿರುತ್ತಿತ್ತು.

ಶ್ರೀ ಜಿಎಸ್‌ಕೆ ನಿವೃತ್ತರಾದ ನಂತರ ಆಗ ಶಾಸಕರಾಗಿದ್ದ ನನಗೆ ಶಾಸಕ ಭವನದಲ್ಲಿ ಒದಗಿಸಲಾಗಿದ್ದ ಕೊಠಡಿಯಲ್ಲೇ ಬಂದು ವಾಸಿಸಲು ಅವರಿಗೆ ವಿನಂತಿಸಿದೆ. ಆ ಸಮಯದಲ್ಲಿ ನನ್ನ ಕೊಠಡಿಗೆ ಅನೇಕ ಸಮಸ್ಯೆಗಳನ್ನು ಹೊತ್ತು ಬರುತ್ತಿದ್ದ ಶಿಕ್ಷಕರು, ಇತರರು ಹಾಗೂ ನಾನು ಅಧ್ಯಕ್ಷನಾಗಿದ್ದ Telephone users Association ನ ಸದಸ್ಯರು ಎಲ್ಲರನ್ನೂ ಬಹಳ ಕಾಳಜಿಯಿಂದ ಸಂಭಾಳಿಸುತ್ತ ಶ್ರೀ ಜಿಎಸ್‌ಕೆ ನನಗೆ ತುಂಬಾ ಸಹಕಾರಿಯಾದರು. 2002ರಲ್ಲಿ ನನ್ನ ಶಾಸಕ ಸದಸ್ಯತ್ವ ಅವಧಿ ಮುಗಿದ ನಂತರ ನಾನು ಶ್ರೀ ಜಿಎಸ್‌ಕೆ ಅವರನ್ನು "ಯಾದವಸ್ಮೃತಿಯಲ್ಲಿರುವ ಶಿಕ್ಷಕ ಸಂಘದ ಕಾರ್ಯಾಲಯದಲ್ಲೇ ನೀವು ವಾಸ್ತವ್ಯ ಮಾಡಿ, ಈಗ ನೀವು ಶಾಸಕರ ಭವನದಲ್ಲಿ ಮಾಡುತ್ತಿರುವ ಕೆಲಸವನ್ನು ಮುಂದುವರೆಸಿಕೊಂಡು ಹೋಗಬೇಕು" ಎಂದು ವಿನಂತಿಸಿದಾಗ, ಅವರು ಅದಕ್ಕೂ ಒಪ್ಪಿ ಶಿಕ್ಷಕ ಸಂಘದ ಕಾರ್ಯಾಲಯದಲ್ಲೇ ವಾಸ್ತವ್ಯ ಹೂಡಿದರು. ಆಗ ಅವರಿಗೆ ಶಿಕ್ಷಕ ಸಂಘದ ಕೆಲಸಗಳೂ ಸ್ವಾಭಾವಿಕವಾಗಿ ಅಂಟಿಕೊಂಡವು. ಅವರು ಎಲ್ಲ ಕೆಲಸಗಳನ್ನೂ ಬಹಳ ಶಾಂತವಾಗಿ, ವಿಚಕ್ಷಣತೆಯಿಂದ ನಿಭಾಯಿಸಿಕೊಂಡು ಹೋಗಲು ಪ್ರಾರಂಭಿಸಿದರು. ಆ ಕಾರಣ ಅವರು ಸ್ವಾಭಾವಿಕವಾಗಿಯೇ ಶಿಕ್ಷಕ ಸಂಘದ ಪ್ರಾಂತ ಕಾರ್ಯಾಲಯದ ಮೇಲ್ವಿಚಾರಕರಾಗಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು. ಈ ದೃಷ್ಟಿಯಿಂದಂತೂ ಶಿಕ್ಷಕ ಸಂಘಕ್ಕೆ ಅವರ ನಿಧನ ಒಂದು ದೊಡ್ಡ ನಷ್ಟವೇ ಸರಿ.

ಶ್ರೀ ಜಿಎಸ್‌ಕೆ ಅವರ ಸೌಜನ್ಯ, ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಪ್ರವೃತ್ತಿ, ಶಾಂತ ಸ್ವಭಾವ, ಎಲ್ಲರನ್ನೂ ಆತ್ಮೀಯತೆಯಿಂದ ಕಾಣುವ ಗುಣ, ಜನಗಳನ್ನು ಜೋಡಿಸಿಕೊಂಡು ಹೋಗುವ ಸ್ವಭಾವ, ತಮಗೆ ವಹಿಸಿದ ಕೆಲಸಗಳನ್ನು ಚಾಚೂ ತಪ್ಪದೆ ನಿಷ್ಠೆಯಿಂದ, ಬದ್ಧತೆಯಿಂದ ಮುಗಿಸುವುದು ಮತ್ತು ಕಾರ್ಯಾಲಯದ ಕೆಲಸಗಳಿಗೆ ಅಗತ್ಯವಾದ ಅಂಶಗಳನ್ನು ಕಲಿಯುವ ಗುಣ ಇತ್ಯಾದಿ ಎಲ್ಲಾವೂ ಅನುಕರಣೀಯವಾಗಿರುತ್ತಿತ್ತು.

ಕಾರ್ಯಾಲಯಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರಗಳನ್ನು ಇಡುವ ಕ್ರಮ, ಕಂಪ್ಯೂಟರ್‌ನ ಅನೇಕ ತಂತ್ರಾಂಶಗಳು, ಸರ್ಕಾರಿ ಕಾರ್ಯಾಲಯಗಳು ಮತ್ತು ಬ್ಯಾಂಕ್‌ಗಳೊಡನೆ ಅವಶ್ಯವಾದ ಸಂಬಂಧಗಳು, ವೈಯುಕ್ತಿಕ ಸಂಬಂಧಗಳು, ಕಾರ್ಯಕರ್ತರಿಗೆ ಪ್ರೇರಣೆ, ಮಾರ್ಗದರ್ಶನ ಎಂಬ ಎಲ್ಲ ಅಂಶಗಳ ಬಗ್ಗೆ ನೈಪುಣ್ಯವನ್ನು ಪಡೆಯಲು ಅವರು ಸದಾ ಪ್ರಯತ್ನಿಸುತ್ತಿದ್ದರು. ಅವರದು ಅತ್ಯಂತ ಸರಳ ಜೀವನ, ನೇರ ವ್ಯವಹಾರ. ಸ್ವಂತ ಅವಶ್ಯಕತೆಗಳು ತೀರ ಕಡಿಮೆ. ಸದಾ ಶಿಕ್ಷಕರ, ಶಿಕ್ಷಕ ಸಂಘಟನೆಯ ಹಿತ, ನೊಂದಿರುವವರಿಗೆ ಸಹಾಯ ಮಾಡುವುದು ಇವರ ರಕ್ತದಲ್ಲೇ ಇದ್ದ ಗುಣವಾಗಿತ್ತು.

ಒಟ್ಟಿನಲ್ಲಿ ಶಿಕ್ಷಕ ಸಂಘದ ಕಾರ್ಯಕರ್ತರಿಗೆ ಮಾತ್ರವಲ್ಲದೆ ಯಾದವಸ್ಮೃತಿಯಲ್ಲಿ ಇರುವ ಸಂಘದ ವಿವಿಧ ಕ್ಷೇತ್ರಗಳ ಕಾರ್ಯಕರ್ತರಿಗೆ ಅಣ್ಣನಂತೆ, ಕೆಲವರಿಗೆ ತಂದೆಯಂತೆ ಅವರು ತಮ್ಮ ಕರ್ತವ್ಯಗಳನ್ನು ನಿರಪೇಕ್ಷತೆಯಿಂದ ನಿರ್ವಹಿಸುತ್ತಿದ್ದರು.

ಶಿಕ್ಷಕ ಸಂಘದ ಮಾಸ ಪತ್ರಿಕೆ "ಶಿಕ್ಷಕ ಸಮಾಚಾರ"ದ ನಿಯಮಿತ ಪ್ರಕಟಣೆಗಾಗಿ ಲೇಖನ ಸಂಗ್ರಹ, ಮುದ್ರಣಕ್ಕೆ ಸಿದ್ಧತೆ ಮತ್ತು ಎಷ್ಟೋ ಬಾರಿ ಮುದ್ರಣಾಲಯದಲ್ಲೇ ಬೆಳಗಿನಿಂದ ಸಂಜೆಯವರೆಗೆ ಆ ಕೆಲಸದಲ್ಲೇ ನಿರತರಾಗಿರುತ್ತಿದ್ದರು. ನಿಗದಿತ ದಿನವೇ ಅಂಚೆಗೆ ಹಾಕಬೇಕಾಗಿದ್ದ ಪತ್ರಿಕೆಗಳನ್ನು ಸ್ವತಃ ಪೋಸ್ಟ್ ಆಫೀಸ್‌ಗೆ ಹೋಗಿ ಅಲ್ಲಿ ಬರುವ ಸಮಸ್ಯೆಗಳನ್ನು ಪರಿಹರಿಸಿ ಚಂದಾದಾರರಿಗೆ ಪತ್ರಿಕೆ ಸಮಯಕ್ಕೆ ಸರಿಯಾಗಿ ತಲುಪುವಂತೆ ಮಾಡುತ್ತಿದ್ದರು. ಬದಲಾದ ಕಾಲಕ್ಕೆ ತಕ್ಕಂತೆ ಹಾಗು ಅನುಭವದಿಂದ ಶಿಕ್ಷಕ ಸಂಘದ ಸಂವಿಧಾನವನ್ನು ಬದಲಿಸಬೇಕಾಗಿ ಬಂದಾಗಲೆಲ್ಲಾ ನಾನು ಆ ಕೆಲಸಕ್ಕೆ ಸೂಕ್ತ ವ್ಯಕ್ತಿ ಶ್ರೀ ಜಿಎಸ್‌ಕೆ ಎಂದು ಅವರೊಡನೆ ಕುಳಿತು ಸಂವಿಧಾನವನ್ನು ಸೂಕ್ತರೀತಿಯಲ್ಲಿ ಸ್ಪಷ್ಟತೆಯೊಂದಿಗೆ ಬದಲಿಸುವ ಕೆಲಸವನ್ನು ಮಾಡುತ್ತಿದ್ದೆ.

1988ರಿಂದ ಅಂದರೆ ನಮ್ಮ ಶಿಕ್ಷಕ ಸಂಘ ನೊಂದಾವಣೆ ಆದಂದಿನಿಂದ ಇಂದಿನವರೆಗೆ ನಾವು ಪ್ರತಿವರ್ಷ ನಮ್ಮ ಕೆಲಸದ ವರದಿ, ಆಡಿಟ್ ಆಗಿರುವ ವಾರ್ಷಿಕ ಲೆಕ್ಕಪತ್ರಗಳನ್ನು ಸೊಸೈಟಿ ನೊಂದಣಾಧಿಕಾರಿಗಳಿಗೆ ಸಮಯಕ್ಕೆ ಸರಿಯಾಗಿ ನೊಂದಾಯಿಸಿದ್ದೇವೆ. ಇದು ಅಷ್ಟು ಸುಲಭವಾದ ಕೆಲಸವಲ್ಲ. ಆ ಕೆಲಸದಲ್ಲಿ ಶಿಕ್ಷಕ ಸಂಘದ ಜೊತೆಗೆ ಬಲವಾಗಿ ನಿಂತವರು ಶ್ರೀ ಜಿಎಸ್‌ಕೆಯವರೇ.

ನಮ್ಮ ಶಿಕ್ಷಕ ಸಂಘ All India Secondary Teachers Federation (AISTF) ಮತ್ತು ಅಖಿಲಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘಗಳೊಡನೆ ಸಂಲಗ್ನವಾಗಿದೆ. ಈ ಎರಡೂ ಅಖಿಲ ಭಾರತ ಶಿಕ್ಷಕರ ಸಂಘಟನೆಗಳ ಕಾರ್ಯಕಾರಿ ಸಮಿತಿ ಸಭೆಗಳು ಮತ್ತು ಅನ್ಯ ಕಾರ್ಯಕ್ರಮಗಳ ಸಲುವಾಗಿ ವರ್ಷಕ್ಕೆ 8–10 ಬಾರಿ ಉತ್ತರ ಭಾರತಕ್ಕೆ ವಿಶೇಷವಾಗಿ ದೆಹಲಿಗೆ ಸಭೆಗಳಿಗಾಗಿ ಹೋಗಬೇಕಾಗುತ್ತಿತ್ತು. ನಮ್ಮ ಅಧ್ಯಕ್ಷ, ಕಾರ್ಯದರ್ಶಿಗಳ ಜೊತೆಗೆ ಪ್ರತಿನಿಧಿಯಾಗಿ ಪ್ರತಿಬಾರಿ ಶ್ರೀ ಜಿಎಸ್‌ಕೆ ನಮ್ಮೊಡನೆ ಇರುತ್ತಿದ್ದರು. ಸಭೆಗಳಿಗೆ ಬರುತ್ತಿದ್ದ ಎಲ್ಲ ಶಿಕ್ಷಕ ನಾಯಕರುಗಳ ಗೌರವಕ್ಕೆ ಶ್ರೀ ಜಿಎಸ್‌ಕೆ ಪಾತ್ರರಾಗಿದ್ದರು.

Education International– ಇದು ರಾಷ್ಟ್ರಮಟ್ಟದ ಶಿಕ್ಷಕ ಸಂಘಟನೆಗಳ

**ಪುಟ 6 ಕ್ಕೆ ➤**

# ಕೃಷ್ಣಮೂರ್ತಿ ಇನ್ನು ನೆನಪು ಮಾತ್ರ

## ನಮ್ಮ ಸ್ನೇಹದ ಬಂಧ ಆತ್ಮ ಸಂಬಂಧ

■ **ಹೆಚ್. ನಾಗಭೂಷಣ್ ರಾವ್**
**ಪೋಷಕರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಕೃಷ್ಣನ ಮೂರ್ತಿ ಕಣ್ಣಮುಂದೆ ನಿಂತಂತಿದೆ ಎಂದರು ಪುರಂದರದಾಸರು. ಅದು ಅವರು ಕಂಡ ಕೃಷ್ಣಮೂರ್ತಿ. ನಾ ಕಂಡ ಕೃಷ್ಣಮೂರ್ತಿ ನನಗೂ ಕಣ್ಣಮುಂದೆ ನಿಂತಂತಿದೆ. ಕಾರಣ ನನ್ನ ಅವರ ಸಂಬಂಧ 1986 ರಿಂದ 2021 ಅಂದರೆ 35 ವರ್ಷದ್ದು. ನಮ್ಮ ಸ್ನೇಹದ ಬಂಧ ಪರಿವಾರದ ಬಂಧಕ್ಕಿಂತ ಮಿಗಿಲು. ಅದು ಆತ್ಮ ಸಂಬಂಧ.

ನಾನು ಮಾಧ್ಯಮಿಕ ಶಿಕ್ಷಕ ಸಂಘದ ಆಜೀವ ಸದಸ್ಯನಾದದ್ದು 70ರ ದಶಕದ ಅಂತ್ಯದಲ್ಲಿ. ಅವರು ಶಿಕ್ಷಕ ಸಂಘಕ್ಕೆ ಬಂದದ್ದು 1984ರಲ್ಲಿ. ಆಗವರು ವಿಮಾನ ಕಾರ್ಖಾನೆಯ ಪ್ರೌಢಶಾಲೆಯಲ್ಲಿ ಗಣಿತ ಮತ್ತು ವಿಜ್ಞಾನದ ಅಧ್ಯಾಪಕರು. ಶಾಲೆ ಮುಗಿದ ನಂತರ ಅವರು ಪತ್ರಿಕೋದ್ಯಮದ ವಿದ್ಯಾರ್ಥಿಯಾಗಿ ಭಾರತೀಯ ವಿದ್ಯಾಭವನದ ಕಾಲೇಜಿಗೆ ಹೋಗುತ್ತಿದ್ದರು. ಅಲ್ಲಿ ಅವರಿಗೆ ಪರಿಚಯವಾಗಿದ್ದು ನನ್ನ ಹಿರಿಯ ಮಿತ್ರರಾಗಿದ್ದ ದಿವಂಗತ ಪಿ. ಆರ್. ಆನಂದರಾಯರು. ಆನಂದರಾಯರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಕಾರ್ಯಕರ್ತರು. ಅವರೂ ಸಹ ಪತ್ರಿಕೋದ್ಯಮದ ವಿದ್ಯಾರ್ಥಿ ಆಗಿದ್ದರು. ಪರಿಚಯ ಸ್ನೇಹಕ್ಕೆ ತಿರುಗಿತು. ಇದೇ ಸಮಯದಲ್ಲಿ ಶ್ರೀ ಕೃ. ನರಹರಿಯವರು ಹಿರಿಯರ ಒತ್ತಾಯಕ್ಕೆ ಮಣಿದು ಕರ್ನಾಟಕ ವಿಧಾನ ಪರಿಷತ್ತಿಗೆ ಬೆಂಗಳೂರು ಶಿಕ್ಷಕ ಕ್ಷೇತ್ರದಿಂದ ನಡೆದ ಚುನಾವಣೆಗೆ ಸ್ಪರ್ಧಿಸಿದ್ದರು. ಆನಂದರಾಯರು, ಶ್ರೀ ನರಹರಿಯವರ ವ್ಯಕ್ತಿತ್ವದ ಪರಿಚಯ ಮಾಡಿ "ನೀವೇಕೆ ನರಹರಿಯವರ ಪರವಾಗಿ ಚುನಾವಣೆ ಕೆಲಸ ಮಾಡಬಾರದು" ಎಂದು ಜಿ. ಎಸ್. ಕೃಷ್ಣಮೂರ್ತಿಯವರನ್ನು ಕೇಳಿದರು. ಜಿಎಸ್‌ಕೆಗೆ ಹೈಸ್ಕೂಲ್ ಓದುವಾಗ ಆರ್. ಎಸ್. ಎಸ್. ನ ಅಲ್ಪಸ್ವಲ್ಪ ಪರಿಚಯವಾಗಿತ್ತು. "ನರಹರಿಯವರ ವಿಚಾರ ನನ್ನ ಮನಸ್ಸಿನ ಭಾವನೆಗಳಿಗೆ ಬಹಳ ಹತ್ತಿರದ ವಿಚಾರ" ಎಂದು ತಿಳಿದ ಜಿ.ಎಸ್.ಕೆ. ಚುನಾವಣೆ ಕೆಲಸಕ್ಕೆ ಸಕ್ರಿಯವಾಗಿ ಧುಮಿಕಿದರು. ಈ ರೀತಿ ಅವರು ಶಿಕ್ಷಕ ಸಂಘಕ್ಕೆ ಪ್ರವೇಶಿಸಿದರು. ಕೆಲವೇ ದಿನಗಳಲ್ಲಿ ಅದರ ಸಕ್ರಿಯ ಕಾರ್ಯಕರ್ತರೂ ಆದರು. ಅಷ್ಟೇ ಅಲ್ಲ, ಅವರ ವಾಸ್ತವ್ಯವನ್ನು ತಮ್ಮ ರೂಮ್ ನಿಂದ ಶಾಸಕರ ಭವನದ ನರಹರಿಯವರ 312ನೇ ಕೊಠಡಿಗೆ ಸ್ಥಳಾಂತರಿಸಿದರು. ಅಂದು ಕೊಠಡಿ 312 ಸಂಘದ ಕಾರ್ಯಾಲಯವೂ ಆಗಿತ್ತು. ನಾನೂ ಆಗಾಗ್ಯೆ ಕಾರ್ಯಾಲಯಕ್ಕೆ ಹೋಗುತ್ತಿದ್ದುದರಿಂದ ಪರಿಚಯ ಸ್ನೇಹಕ್ಕೆ ತಿರುಗಿತು. ಅಂದು ಬೆಳೆದ ಸ್ನೇಹಬಂಧ ಅಖಂಡವಾಗಿ ಕೊನೆವರೆಗೆ ಮುಂದುವರೆಯಿತು.

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ಗರ್ಗೇಶ್ವರಿ ಎಂಬ ಕುಗ್ರಾಮ ಅವರ ಜನ್ಮಸ್ಥಳ. ಹುಟ್ಟಿದ್ದು 20–8–1938. ತಂದೆ ಶ್ರೀ ಸುಬ್ಬರಾವ್, ತಾಯಿ ಅಲಮೇಲಮ್ಮ ಸುಬ್ಬರಾವ್. ಇಬ್ಬರು ತಂಗಿಯರು ನಾಲ್ಕು ಜನ ಅಣ್ಣಂದಿರ ತುಂಬು ಕುಟುಂಬ. ಬಡತನವೇ ತಂದೆಯವರ ಆಸ್ತಿ. ಪ್ರಾಥಮಿಕ ಶಿಕ್ಷಣದ ನಂತರ ಓದು ಮುಂದುವರೆಸಲು ತಂದೆಯವರಿಗೆ ಆತ್ಮೀಯರಾಗಿದ್ದ ಮೈಸೂರಿನ ಅವರ ಗೆಳೆಯರ ಮನೆಗೆ ಬಂದರು. ಅದೂ ಮಕ್ಕಳಿಂದ ತುಂಬಿದ ಮನೆ. ಆ ಮಕ್ಕಳೊಂದಿಗೆ ಇವರೂ ಬೆಳೆದರು. ಅಲ್ಲೇ ಅವರಿಗೆ ತಾಯಿಯ ವಾತ್ಸಲ್ಯ ದೊರೆತದ್ದು. ಆ ಮನೆ ಅವರ ಹೃದಯಕ್ಕೆ ತುಂಬಾ ಹತ್ತಿರದ ಮನೆ. ಆ ಮನೆಗೆ ಅವರು ಹೈಸ್ಕೂಲ್ ವಿದ್ಯಾರ್ಥಿಯಾಗಿ ಬಂದಿದ್ದು. ಯುವರಾಜ ಕಾಲೇಜಿನಲ್ಲಿ ಬಿಎಸ್ಸಿ, ಗಂಗೋತ್ರಿಯಲ್ಲಿ ಎಂ ಎಸ್ಸಿ ಮುಗಿಸಿ ಕೆಲಸಕ್ಕೆ ಸೇರುವವರೆಗೆ ಅದೇ ಅವರ ಮನೆ. ತಾವು ಬೆಳೆದ ಮೈಸೂರಿನ ತಮ್ಮ ಕಸಿನ್ ಮನೆಗೆ ಮಾತ್ರ ತಿಂಗಳೋ ಅಥವಾ ಎರಡು ತಿಂಗಳಿಗೋ ಒಮ್ಮೆಯಾದರೂ ಹೋಗಿಬರುತ್ತಿದ್ದರು. ಅದೇ ನನ್ನ ಮನೆ ಎನ್ನುತ್ತಿದ್ದರು.

ಶಿಕ್ಷಕ ಸಂಘಕ್ಕೆ ಬಂದನಂತರ ಅದೇ ಅವರ ಮನೆಯಾಯಿತು. ಅಲ್ಲಿನ ಕಾರ್ಯಕರ್ತರೇ ಅವರ ಬಂಧುಗಳಾದರು. ಅಂದಿನ ಪ್ರಧಾನ ಕಾರ್ಯದರ್ಶಿ ಆಗಿದ್ದ ಎಡಗೂರು ಸತ್ಯನಾರಾಯಣ ಅವರಿಗೆ ಬಲು ಆತ್ಮೀಯ. ಶಿಕ್ಷಕ ಸಂಘದ ರಾಜ್ಯ ಪ್ರತಿನಿಧಿಯಾಗಿ ಆಲ್‌ಇಂಡಿಯಾ ಸೆಕೆಂಡರಿ ಟೀಚರ್ಸ್ ಫೆಡರೇಷನ್‌ನ ಕೇಂದ್ರೀಯ ಮೀಟಿಂಗ್‌ಗಾಗಿ ಅದೆಷ್ಟು ಬಾರಿ ಭಾರತದ ವಿವಿಧ ಸ್ಥಳಗಳಿಗೆ ಹೋಗಿ ಬಂದಿದ್ದರೋ ಲೆಕ್ಕವೇ ಇಲ್ಲ. ಕೆಲವೊಮ್ಮೆ ಅವರೊಂದಿಗೆ ನಾನೂ ಹೋಗಿದ್ದುಂಟು. ಆಗೆಲ್ಲಾ ನಮ್ಮ ಪ್ರವಾಸ ರೈಲಿನ ಸ್ಲೀಪರ್ ಕೋಚ್‌ನಲ್ಲಿ. ಅವರು ಕಾಫಿ ಪ್ರಿಯರು. ಆಗಾಗ್ಗೆ ಕಾಫಿ ಬೇಕೇಬೇಕು. ಅದಕ್ಕಾಗಿ ಪ್ಯಾಂಟ್ರಿಗೆ ಒಬ್ಬರೇ ಹೋಗಿಬರುತ್ತಿದ್ದರು. ಯಾದವಸ್ಮೃತಿಯಲ್ಲಿ ಮಾತ್ರ ಅವರಿಗೆ ಶ್ರೀ ಸದಾಶಿವ, ರೈತಸಂಘದ ಶ್ರೀ ಪುಟ್ಟಸ್ವಾಮಿ ಕಾಫಿ ಜತೆಗಾರರು. ಅವರ ಕಾಫಿ ಪ್ರಿಯತೆಯ ಬಗ್ಗೆ ಶ್ರೀ ಪುಟ್ಟಸ್ವಾಮಿ "ಜಿಎಸ್‌ಕೆ ತೀರಿಕೊಂಡರೆ ನಮ್ಮ ಯಾದವಸ್ಮೃತಿಯ ಗೇಟ್ ಬಳಿ ಒಂದು ಹಂಡೆ ಕಾಫಿ ಇಟ್ಟು, ರಸ್ತೆಯಲ್ಲಿ ಬಂದವರಿಗೆಲ್ಲಾ ಕಾಫಿ ಕೊಟ್ಟು ಕಳಿಸುತ್ತೇವೆ" ಎಂದು ತಮಾಷೆ ಮಾಡಿದ್ದುಂಟು. ಅವರಿಗೆ ಇಷ್ಟವಾದ ಇನ್ನೊಂದು ಸಂಗತಿ 'ಹಿಂದೂ' ಪತ್ರಿಕೆ. ಅದನ್ನು ಓದದೇ ಅವರು ಮಲಗುತ್ತಿರಲಿಲ್ಲ. ಜಿಎಸ್‌ಕೆ ತುಂಬಾ ಸಂಕೋಚ ಪ್ರವೃತ್ತಿಯವರು. ಯಾರನ್ನೂ ತುಂಬಾ ಹಚ್ಚಿಕೊಂಡವರಲ್ಲ. ತಮ್ಮ ಸ್ವಂತ ಅಣ್ಣ ತಂಗಿಯರ ಮನೆಗಳಿಗೇ ಅಪರೂಪಕ್ಕೆ ಹೋಗುತ್ತಿದ್ದರು. ಆದರೆ ಅದೇನೋ ನಮ್ಮ ಮನೆಯನ್ನು ತುಂಬಾನೇ ಹಚ್ಚಿಕೊಂಡಿದ್ದರು. ತಿಂಗಳಲ್ಲಿ ಒಮ್ಮೆಯಾದರೂ ಮನೆಗೆ ಬಂದು ಮನೆ ಮಂದಿಯವರೊಂದಿಗೆ ಆತ್ಮೀಯತೆಯಿಂದ ಬೆರೆತು ಕೊನೇ ಪಕ್ಷ ಕಾಫಿಯನ್ನಾದರೂ ಕುಡಿದು ಹೋಗುತ್ತಿದ್ದರು.

ನನ್ನಿಬ್ಬರು ಮಕ್ಕಳು ಸ್ಮಿತಾ ಮತ್ತು ಶ್ವೇತಾ ಅವರಿಗೆ ತುಂಬಾನೇ ಪ್ರೀತಿ ಪಾತ್ರರು. ಅವರು ಕಾಲೇಜಿಗೆ ಹೋದ ನಂತರವೂ ಮನೆಗೆ ಬಂದಾಗ ಅವರಿಬ್ಬರಿಗೆ ಏನಾದರೂ ವಸ್ತುವನ್ನು ತಂದುಕೊಡದಿದ್ದರೆ ಅವರಿಗೆ ಸಮಾಧಾನವಿಲ್ಲ. ದೊಡ್ಡ ಮಗಳು ಸ್ಮಿತಾ ಇಂಜಿನಿಯರಿಂಗ್ ಮುಗಿಸಿ ಕೆಲಸಕ್ಕೆ ಸೇರಿ ಮೊದಲ ತಿಂಗಳ ಸಂಬಳ ತಂದ ದಿನ ಜಿಎಸ್‌ಕೆ ಮನೆಗೆ ಬಂದಿದ್ದರು. ಸ್ಮಿತಾ ಅವರಿಗೆ ತನ್ನ ಸಂಪಾದನೆಯ ಬಗ್ಗೆ ತಿಳಿಸಿ ಅವರಿಗಾಗಿ ತಾನು ತಂದಿದ್ದ ಕಾಣಿಕೆಯೊಂದನ್ನು ಕೊಡಲು ಹೋದಾಗ ಏನು ಮಾಡಿದರೂ ಅವರದನ್ನು ತೆಗೆದುಕೊಳ್ಳಲಿಲ್ಲ. "ಸಂಬಳ ಬಂದಿರುವುದು ನೀ ಮಾಡಿದ ಸಾಧನೆಗೆ, ಅದರಲ್ಲಿ ನನ್ನ ಪಾತ್ರ ಏನಿದೆ" ಎನ್ನುತ್ತಾ, ಬದಲಿಗೆ ತಾವೇ ತಮ್ಮ ಶಾಲೆಯಲ್ಲಿ ಸನ್ಮಾನ ಮಾಡಿದಾಗ ಕೊಟ್ಟಿದ್ದ ಕೆಂಪುಬಣ್ಣದ ಪರ್ಸ್ ಅನ್ನು ಅವಳಿಗೆ ಕಾಣಿಕೆಯಾಗಿ ನೀಡಿದ್ದನ್ನು ನೆನಪಿಸಿಕೊಂಡಳು. ನನ್ನ ಮಡದಿ ಶ್ರೀಮತಿ ಸೀತಾಲಕ್ಷ್ಮಿ ಸಹ ಶಿಕ್ಷಕಸಂಘದ ಕಾರ್ಯಕರ್ತೆಯಾಗಿ ಇದ್ದವಳು. ಅವರಿಗೆ ಆಕೆಯ ಬಗ್ಗೆಯೂ ಅಪಾರ ಅಭಿಮಾನ. ಆಕೆಯನ್ನು ತಮ್ಮ ಒಡಹುಟ್ಟಿದ ಸೋದರಿಯಂತೆ ಭಾವಿಸುತ್ತಾ ಅನೇಕ ಬಾರಿ ಕಟುವಾಗಿ ತಿದ್ದಿದ್ದೂ ಉಂಟು.

**ಪುಟ 12 ಕ್ಕೆ ➢**

# ಸಂಘಟನೆಯ ಸಾಕ್ಷಿಪ್ರಜ್ಞೆಯಾಗಿದ್ದ ಜಿ.ಎಸ್.ಕೆ.

■ **ಕೆ. ಬಾಲಕೃಷ್ಣ ಭಟ್** ಸುರತ್ಕಲ್,
ದಕ್ಷಿಣ ಮಧ್ಯ ಕ್ಷೇತ್ರಿಯ ಪ್ರಮುಖರು, ಎಬಿಆರ್‌ಎಸ್‌ಎಂ

ನಮ್ಮಂತಹ ಆತ್ಮೀಯರಿಂದ ಜಿ.ಎಸ್.ಕೆ ಎಂದೇ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಜಿ.ಎಸ್.ಕೃಷ್ಣಮೂರ್ತಿಯವರು ಇಂದು ಭೌತಿಕವಾಗಿ ನಮ್ಮ ಜತೆಗಿಲ್ಲ. ಅವರು ನಮ್ಮೆಲ್ಲರ ಮೇಲೆ ತೋರಿದ ಪ್ರೀತಿ, ಅಭಿಮಾನ ಮಾತ್ರ ಎಂದೂ ಮರೆಯಲಾಗದ್ದು. ಒಬ್ಬ ವ್ಯಕ್ತಿ ಹೇಗೆ ಬದುಕಿದ್ದ ಎಂಬುದು ಆತ ಮರಣ ಹೊಂದಿದ ಅನೇಕ ಕಾಲವೂ ನೆನಪಿನಲ್ಲಿ ಉಳಿದರೆ ಮಾತ್ರ ಗೊತ್ತಾಗುತ್ತದೆ. ಇದಕ್ಕೆ ಕೃಷ್ಣಮೂರ್ತಿ ಒಳ್ಳೆಯ ನಿದರ್ಶನ.

ಜಿ.ಎಸ್.ಕೆ ಅಂತಹ ದೊಡ್ಡ ಮನುಷ್ಯನಾಗಿರಲಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬದುಕಿದವರು. ಅವರು ತೀರಿಕೊಂಡ ವಾರ್ತೆ ಬಂದ ಕ್ಷಣ ನನ್ನ ಸಹಜ ಉದ್ಗಾರವಿದ್ದುದು–"ಒಬ್ಬ ಸಜ್ಜನ ವ್ಯಕ್ತಿ ಇಲ್ಲದಾದರಲ್ಲ!" ಎಂದು. ಅವರು ನಿಜವಾದ ಅರ್ಥದಲ್ಲಿ ಸಜ್ಜನ, ಸಜ್ಜನರಲ್ಲಿರುವ ಅನೇಕ ಗುಣಗಳು ಅವರಲ್ಲಿದ್ದುವು. ಒಳ್ಳೆಯ ಅಧ್ಯಾಪಕ, ಒಳ್ಳೆಯ ಮಿತ್ರ ಇನ್ನೊಬ್ಬರಿಗೆ ಆಪತ್ತಿನಲ್ಲಿ ನೆರವಾದವರು, ಅದನ್ನು ಎಂದೂ ಯಾರೊಡನೆಯೂ ಹೇಳಿಕೊಳ್ಳದವರು. ಬಲಗೈಯಿಂದ ಕೊಟ್ಟಿದ್ದನ್ನು ಎಡಗೈಗೆ ಹೇಳಬಾರದು ಎನ್ನುತ್ತಾರಲ್ಲ– ಹಾಗಿದ್ದವರು. ಗಣಿತ, ವಿಜ್ಞಾನ ಶಿಕ್ಷಕರಾಗಿದ್ದರೂ ಒಳ್ಳೆಯ ಇಂಗ್ಲೀಷ್ ಭಾಷಾತಜ್ಞರೂ, ಪತ್ರಿಕೋದ್ಯಮದ ವಿದ್ಯಾರ್ಥಿಯಾಗಿದ್ದರು. ನಮ್ಮ ಮಧ್ಯೆಯೇ ಇದ್ದ "ನಡೆದಾಡುವ ವಿಶ್ವಕೋಶ" ಅವರು. ಹತ್ತಾರು ವರ್ಷಗಳ ಕಾಲ ಆಂಗ್ಲಭಾಷಾ ಪತ್ರಿಕೆ– "ದಿ ಹಿಂದೂ" ಅನ್ನು ಅಡಿಯಿಂದ ಮುಡಿಯವರೆಗೆ ಮಗುಚಿ ಹಾಕಿದ್ದು ಮಾತ್ರವಲ್ಲ ಓದಿದವರೂ ಸಹ.

"ದಿ ಹಿಂದೂ" ಪತ್ರಿಕೆಯ ವೈಚಾರಿಕತೆಯನ್ನು ಒಪ್ಪದ ಅವರು ಒಬ್ಬ ನಿಜ ಹಿಂದು. ತಾನೊಪ್ಪದ ವಿಚಾರವನ್ನೂ ಗೌರವಿಸುವವರು. 40 ವರ್ಷಕ್ಕೂ ಹೆಚ್ಚು ಕಾಲ ಸಕ್ಕರೆ ಕಾಯಿಲೆಯ ಜತೆಗೇ ಗುದ್ದಾಡಿಯೂ ಸೋಲೊಪ್ಪದವರು. ಸಿಹಿ ಹಾಕದ A strong ಕಾಫಿಯ ಭಕ್ತ. ಕಾಲಕಾಲಕ್ಕೆ ಪ್ರವಾಸದಲ್ಲಿ ಅದು ಸಿಗದಾದಾಗ ಒದ್ದಾಡುವವರು. ನಾನು ಬೆಂಗಳೂರಿಗೆ ಇಂತಹ ದಿನ ಇಷ್ಟು ಹೊತ್ತಿಗೆ ಬರುವೆನೆಂಬ ವಿಷಯ ತಿಳಿದರೆ ಬರುವ ತನಕವೂ ಕಾತರದಿಂದ ನಿರೀಕ್ಷಿಸಿದವರು. ಪ್ರೀತಿಯಿಂದ ಬಿಸಿಬಿಸಿ ಕಾಫಿ ಮಾಡಿ ಕೊಡುವವರು. ಕಾಫಿ, ಚಾ ಎಲ್ಲಿ ಬೇಕಾದರೂ ಸಿಗಬಹುದು. ಆದರೆ ಜಿ.ಎಸ್.ಕೆ ಕೈಯ ಕಾಫಿಯಲ್ಲಿ ಅದೆಂತಹಾ ಪ್ರೀತಿಯಿತ್ತು ಎಂಬುದು ಅದನ್ನು ಪಡೆದವರಿಗೇ ಮಾತ್ರ ಗೊತ್ತು. 'ಯಾದವಸ್ಮೃತಿ'ಯಲ್ಲಿದ್ದ ವಿವಿಧ ಸಂಘಟನೆಗಳ ಒಬ್ಬೊಬ್ಬ ಕಾರ್ಯಕರ್ತನನ್ನೂ ವೈಯಕ್ತಿಕವಾಗಿ ಬಲ್ಲವರು, ಒಲವನ್ನು ಹಂಚಿದವರು. ಅವರ ಮರಣದ ಒಂದು ವಾರ ಮೊದಲು ಎಂದಿನಂತೆ ದೂರವಾಣಿಯಲ್ಲಿ ಮಾತನಾಡಿದಾಗ ತನ್ನ ಅನಾರೋಗ್ಯದ ಮಧ್ಯೆಯೂ ನನ್ನ ಆರೋಗ್ಯದ ಬಗ್ಗೆ ಕಾಳಜಿಯಿಂದ ವಿಚಾರಿಸಿ – "ಕೊರೋನಾದ ಕಾರಣಕ್ಕೆ ಈಗ ಬರಬೇಡಿ. ಒಂದು ತಿಂಗಳು ಬಿಟ್ಟು ಬನ್ನಿ" ಅಂದಿದ್ದರು. ಆ ಒಂದು ತಿಂಗಳು ಕಳೆಯಲು ಅವರು ಮರಣಿಸಬೇಕಿತ್ತೇ? ಕಾಲ ಯಾರನ್ನು ಕಾಯುವುದಿಲ್ಲವಲ್ಲ!.

ಮದುವೆ, ಕುಟುಂಬ, ಸಂಸಾರ ಹೀಗೆ ಯಾವುದನ್ನು ಇಟ್ಟುಕೊಳ್ಳದಿದ್ದರೂ ಸಮಾಜವನ್ನೇ ಕುಟುಂಬವಾಗಿ ಮಾಡಿಕೊಂಡಿದ್ದವರು. ಕೊನೆಗೂ ಯಾರಿಗೂ 'ಹೊರೆ'ಯಾಗದೆ ನಮ್ಮ ಮೇಲೆಯೇ ಪ್ರೀತಿಯ ಹೊರೆಯನ್ನಿಟ್ಟು ಸದ್ದಿಲ್ಲದೆ ತೆರಳಿದವರು. ಯಾವುದೋ ಒಂದು ಸಂದರ್ಭದಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ಸಭೆಯಲ್ಲಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿರುವಾಗ "ಶಿಕ್ಷಕ ಸಂಘಕ್ಕೆ ಕೃಷ್ಣಮೂರ್ತಿಯವರ contribution ಏನಿದೆ ರೀ" ಎಂದು ಉದ್ಗರಿಸಿದವರಿಗೆ ಈಗ ಅರ್ಥವಾಗಬೇಕು. ಜಿ.ಎಸ್.ಕೆ ಇಲ್ಲದ ಸಂಘ ಹೇಗೆ ಬಡವಾಗುತ್ತಿದೆ ಎಂದು. ನಮ್ಮ ಸಂಘಟನೆಯ ಕೇಂದ್ರ ಕಾರ್ಯಾಲಯದಲ್ಲೇ ಹತ್ತಾರು ವರ್ಷಗಳ ಕಾಲ ವಾಸವಿದ್ದು, ಒಬ್ಬೊಬ್ಬ ಪದಾಧಿಕಾರಿಯ ಬಗೆಗೂ ಸಂಪೂರ್ಣ 'ಮಾಹಿತಿ' ಸಂಗ್ರಹಿಸಿ, ಅನಿವಾರ್ಯವಾದಾಗ ಮಾತ್ರ ಸಂಘಟನೆಯ ಹಿತದೃಷ್ಟಿಯಿಂದ ಬಿಗಿಯಾಗೇ ಮಾತನಾಡಿದವರು.

ತನ್ನ ವೈಯಕ್ತಿಕ ಕಷ್ಟ–ಕಾರ್ಪಣ್ಯಗಳನ್ನು ಯಾರಿಗೂ ತಿಳಿಯಪಡಿಸದೆ, ಇನ್ನೊಬ್ಬರ ಕಷ್ಟಕ್ಕೆ ಒದಗಿ ಬಂದವರು. ಪ್ರತಿ ಮಹಾಶಿವರಾತ್ರಿಯಂದು ಪೂರ್ತಿ ನಿರಶನರಾಗಿದ್ದು, ತನ್ನ ಹುಟ್ಟೂರು ಗರ್ಗೇಶ್ವರಿಗೆ ಭೇಟಿ ನೀಡುವ ಸಂಪ್ರದಾಯ ಪಾಲಿಸುತ್ತಿದ್ದವರು. ಕೃಷ್ಣಮೂರ್ತಿಯವರ ಜನ್ಮಸ್ಥಾನಕ್ಕೆ ನಾನು ಭೇಟಿ ಮಾಡಬೇಕೆಂದು ಅವರ ಬಳಿ ಹತ್ತಾರು ಬಾರಿ ಅಂದಿದ್ದೆ. ಕಳೆದ ವರ್ಷದ ಒಂದು ದಿನ ಶಿವರಾತ್ರಿಯ ತರುವಾಯ ಮೈಸೂರಿಗೆ ಹೋದ ಸಂದರ್ಭದಲ್ಲಿ ನಮ್ಮ ಮಿತ್ರ ಶಿವಾನಂದ ಸಿಂಧನಕೇರಾರವರ ಜತೆಗೆ ಅಲ್ಲಿಗೆ ತೆರಳಿ ಬಂದುದನ್ನು ಕೃಷ್ಣಮೂರ್ತಿಯವರಿಗೆ ತಿಳಿಸಿದ್ದೆ. ಅವರು ತುಂಬಾ ಖುಷಿ ಪಟ್ಟಿದ್ದರು. ಒಟ್ಟಿನಲ್ಲಿ ನಮಗೆಲ್ಲಾ ಜಿ.ಎಸ್.ಕೆಯನ್ನು ಕಳೆದುಕೊಂಡು ಶಿಕ್ಷಕ ಸಂಘದ ಸ್ಥಾಪಕ ಸದಸ್ಯ, ಆಧಾರಸ್ತಂಭವೊಂದನ್ನು ಕಳೆದುಕೊಂಡ ಅನುಭವ. ಮರೆಯುವುದು ತುಸು ಕಷ್ಟ. ●

# ದೇಶಭಕ್ತ ಕಾರ್ಯಕರ್ತ–ಜಿಎಸ್‌ಕೆ

■ **ಶ್ರೀಮತಿ ಬಿ.ಕೆ ವರಲಕ್ಷ್ಮಿ**
ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತೆ

ಹಲವಾರು ದಶಕಗಳಿಂದ ನಮ್ಮ ಶಿಕ್ಷಕ ಸಂಘದ ಕಾರ್ಯಕರ್ತರನ್ನು ವೈಚಾರಿಕವಾಗಿ ಬೆಳೆಸಿ, ನಿಸ್ವಾರ್ಥಸೇವೆ ಸಲ್ಲಿಸಿದ ಕೀರ್ತಿಶೇಷ ಜಿ.ಎಸ್.ಕೃಷ್ಣಮೂರ್ತಿಯವರು ಸಂಘಕ್ಕೆ ಒಂದು ಆಧಾರಸ್ತಂಭವಾಗಿದ್ದರು. ಇವರು ಸಂಘಕ್ಕೊಂದು ಆಸ್ತಿ ಮತ್ತು ಪ್ರೇರಣಾ ಶಕ್ತಿಯಾಗಿದ್ದರು. ವಿದ್ಯಾಭ್ಯಾಸದ ನಂತರ ಆದರ್ಶ ಶಿಕ್ಷಕರಾಗಿ ಶಿಕ್ಷಣಕ್ಷೇತ್ರಕ್ಕೆ ಸೇವೆಸಲ್ಲಿಸಿ, ನಿವೃತ್ತಿಯ ನಂತರ ಶಿಕ್ಷಕ ಸಂಘದ ಕೆಲಸ ಕಾರ್ಯಗಳೇ ತಮ್ಮ ಉಸಿರೆಂದು ಭಾವಿಸಿದ್ದರು. ಅದ್ಭುತ ವಿಚಾರವಂತರು. ಕಾರ್ಯಕರ್ತರಿಗೆ ಯಾವುದೇ ಸಮಸ್ಯೆ ಇರಲಿ ಅಥವಾ ಸಂಘದ ಯಾವುದೇ ಕಾರ್ಯಕ್ರಮವಿರಲಿ ಎಲೆಮರೆಯ ಕಾಯಾಗಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು. ಇಂಗ್ಲೀಷ್ ಭಾಷೆಯಲ್ಲಿ ಇವರಿಗೆ ಉತ್ತಮ ಪ್ರೌಢಿಮೆಯಿತ್ತು. ಬರಹಗಾರರ ಕಮ್ಮಟ ಯೋಜನೆ ಹಾಕಿಕೊಂಡಾಗ ಶಿಕ್ಷಕ ಸಮಾಚಾರಕ್ಕೆ ಲೇಖನಗಳನ್ನು ಬರೆಯಲು ಸಹಾಯವಾಗುತ್ತದೆ, ಬಹಳ ಒಳ್ಳೆಯ ಯೋಜನೆ ಎಂದು ಮೆಚ್ಚುಗೆ ವ್ಯಕ್ತಪಡಿಸಿ ಪ್ರತಿಹಂತದಲ್ಲೂ ಮಾರ್ಗದರ್ಶನ ನೀಡಿ ಕಾರ್ಯಕ್ರಮದ ನಂತರ ದೂರವಾಣಿ ಕರೆಮಾಡಿ ಸಂತೋಷ ವ್ಯಕ್ತಪಡಿಸಿದರು. ನಾನು ದೂರವಾಣಿಯ ಮೂಲಕ ಮಾತನಾಡುತ್ತಿದ್ದಾಗ ಅವರು ಹೇಳಿದ ಮಾತು "ನನಗೆ ಶಿಕ್ಷಕಸಂಘ ಎಲ್ಲಾ ಕೊಟ್ಟಿದೆ. ಈ ಸಹವಾಸದಿಂದ ನನ್ನ ಆಲೋಚನೆ ಮತ್ತು ವ್ಯಕ್ತಿತ್ವವೇ ಬದಲಾಯಿತು" ಎಂದು ಅಪಾರ ಗೌರವದಿಂದ, ಹೆಮ್ಮೆಯಿಂದ ತಮ್ಮ ಭಾವನೆಯನ್ನು ನನ್ನೊಂದಿಗೆ ಹಂಚಿಕೊಂಡಿದ್ದರು. ಸಾಮಾಜಿಕ ಕಾಳಜಿ ಹೊಂದಿದ್ದ, ನುಡಿದಂತೆ ನಡೆಯುತ್ತಿದ್ದ, ಸ್ವಚ್ಛಮನಸ್ಸಿನ, ಸರಳ, ಸಜ್ಜನ, ಹೃದಯವಂತ, ಪ್ರಾಮಾಣಿಕ, ನಿಷ್ಠಾವಂತ, ದೇಶಭಕ್ತ ಕಾರ್ಯಕರ್ತ ನಮ್ಮ ಕೃಷ್ಣಮೂರ್ತಿ. ಇಂತಹ ಆದರ್ಶ ವ್ಯಕ್ತಿತ್ವದ, ಸಮರ್ಪಿತ ಬದುಕಿನ ಹಿರಿಯರ ಮಾರ್ಗದರ್ಶನ ನನಗೆ ಲಭ್ಯವಾಗಿದ್ದು ನನ್ನ ಅದೃಷ್ಟ. ಇವರ ಸದ್ಗುಣಗಳನ್ನು ಹಾಗೂ ಸೇವೆಯನ್ನು ಸ್ಮರಿಸುತ್ತಾ ಭಗವಂತ ಈ ಕರ್ಮಯೋಗಿಯ ಆತ್ಮಕ್ಕೆ ಸದ್ಗತಿ ನೀಡಲೆಂದು ಪ್ರಾರ್ಥಿಸುತ್ತೇನೆ. ●

# ಸಂಘನಿಷ್ಠೆಯ ಪ್ರತಿರೂಪ ಕೃಷ್ಣಮೂರ್ತಿ

ಆರ್. ಸೀತಾಲಕ್ಷ್ಮಿ
ಮಾರ್ಗದರ್ಶಕರು, ಕ. ರಾ. ಮಾ. ಶಿ. ಸಂ.

**"ನಾವೆಲ್ಲಾ ಉಗಿಬಂಡಿ ಯಾತ್ರಿಕರು. ಜೀವನದ ದಾರಿ ಹಲವು. ತಂಗುದಾಣದಲ್ಲಿ ಇಳಿದು ಹೋಗುತಲಿರುವ ನಮಗೆ ಜೀವನವೇ ಹುಡುಕಾಟ. ಒಂಟಿ ಬಂದರೂ ಒಂಟಿ ಹೋದರೂ ನಮಗೆ ನೂರೆಂಟು ನೆಂಟರು. ಅಂತ ನೆಂಟರಿರಲಿ ನೀವೋರ್ವರು" ಎಂದು HNR ರವರು ಎಂದೋ ಬರೆದ ಕವನ ನೆನಪಿಗೆ ಬರುತ್ತಿದೆ. ಈ ಮಾತು GSK ಹಾಗೂ ನನ್ನ ನಡುವೆ ನಿಜವೇನೋ ಅನ್ನಿಸುತ್ತಿದೆ. ನಮ್ಮ ಕುಟುಂಬದ ಅವಿಭಾಜ್ಯ ಅಂಗವೆನ್ನುವಂತೆ ಜಿ.ಎಸ್.ಕೆ. ರವರು ಇದ್ದರು. ಜಿ.ಎಸ್.ಕೆ.ರವರ ಬಗ್ಗೆ ಬರೆಯಲು ಕೈ ಶಕ್ತಿ ಕುಂದಿ ಬರೆಯುವುದು ಕಷ್ಟವೆನಿಸುತ್ತಿದೆ. ಆದರೆ ಬರೆಯದಿದ್ದರೆ ನನ್ನ ಮನಸ್ಸಿಗೆ ನೆಮ್ಮದಿ ದೊರೆಯುವುದಿಲ್ಲ. ಕೃಷ್ಣಮೂರ್ತಿಯವರ ಒಡನಾಟದ ಕೆಲವು ಘಟನೆಗಳನ್ನು ಅಭಿವ್ಯಕ್ತಪಡಿಸಲು ಇಚ್ಛಿಸುತ್ತೇನೆ.**

"ಪಂಚಮಿ ಹಬ್ಬ ಬರುವುದು ತಂಗಿ. ಅಣ್ಣ ನಾನೇ ಬರುವೆ ನಿಮ್ಮಲ್ಲಿ ಹಬ್ಬ ಮಾಡ್ತಾಕ". ಅಂತ ಪ್ರತಿ ನಾಗರ ಪಂಚಮಿಯ ಹಬ್ಬದಂದು ನಮ್ಮ ಮನೆಯಲ್ಲಿಯೇ ಹಬ್ಬ ಆಚರಿಸುತ್ತಿದ್ದರು. ಬರೀ ನಾಗರಪಂಚಮಿ ಒಂದೇ ಅಲ್ಲ, ವರ್ಷ ಪೂರ್ತಿ ನಡೆಯುವ ಎಲ್ಲ ಹಬ್ಬಕ್ಕೂ (ಮೈಸೂರಿಗೆ ಹೋಗದಿದ್ದರೆ) 2016 ರ ವರೆಗೆ ಬಂದು ಹಬ್ಬ ಆಚರಿಸಿ ಸಂಭ್ರಮಿಸುತ್ತಿದ್ದರು. ನಂತರ ಅನಾರೋಗ್ಯ ನಿಮಿತ್ತ ಹಬ್ಬಕ್ಕೆ ಬರುವುದು ಕಡಿಮೆಯಾಯಿತು. ಬಿಡುವಿನ ದಿನಗಳಲ್ಲಿ ವಾರಕ್ಕೆ ಮೂರು ಅಥವಾ ನಾಲ್ಕು ಬಾರಿ ಬಂದು ಊಟ ಮಾಡಿ 2 ಅಥವಾ 3 ಬಾರಿ ಕಾಫಿ ಕುಡಿದೇ ಹೋಗುತ್ತಿದ್ದರು. ಕಾಫಿಯಿಲ್ಲದೆ ಅವರಿಗೆ ಜೀವನವೇ ಇರುತ್ತಿರಲಿಲ್ಲ. ನಮ್ಮ ಮನೆಯಲ್ಲಿ ಮಾಡಿರುವ ಅಡುಗೆಯನ್ನು ಯಾವುದೇ ಆಕ್ಷೇಪಣೆಯಿಲ್ಲದೆ ಆಸ್ವಾದಿಸಿ ಸಂತೋಷದಿಂದ ಊಟ ಮಾಡುತ್ತಿದ್ದರು. "ಹೇಗಿದೆ ಜಿ.ಎಸ್.ಕೆ. ಅಡುಗೆ" ಎಂದರೆ, "ಯಾರ್‍ರೀ ಇಷ್ಟು ಪ್ರೀತಿಯಿಂದ ರುಚಿಯಾದ ಊಟ ಹಾಕುತ್ತಾರೆ?" ಎಂದು ನನ್ನನ್ನೇ ರೇಗಿಸುತ್ತಿದ್ದರು. "ಸಾರು ಬಡಿಸುವಾಗ ಇನ್ನೊಂದು ಚೂರು ಹಾಕಲಾ?" ಎಂದರೆ "ಎಲ್ಲಿ ಸಾರನ್ನು ಚೂರು ಮಾಡಿ ಹಾಕಿ" ಎಂದು ಹಾಸ್ಯಭರಿತ ಮಾತುಗಳನ್ನು ಆಡಿ ಎಲ್ಲರನ್ನೂ ನಗಿಸುತ್ತಿದ್ದರು. ಇನ್ನು ಬರೀ ನಮ್ಮ ಕುಟುಂಬವಷ್ಟೇ ಅಲ್ಲ ನನ್ನ ತಾಯಿ, ತಂದೆ ಎಲ್ಲರ ಒಡನೆಯೂ ಆತ್ಮೀಯ ಸಂಬಂಧವನ್ನು ಹೊಂದಿದ್ದರು. ಪ್ರತಿವರ್ಷ ಮಹಾಶಿವರಾತ್ರಿಯಂದು ಅವರ ಹುಟ್ಟೂರಾದ ಗರ್ಗೇಶ್ವರಿಗೆ ಹೋಗಿ ಈಶ್ವರನನ್ನು ಸಂದರ್ಶಿಸಿ ಆಶೀರ್ವಾದ ಪಡೆದು ವಾಪಸ್ಸು ಬರುವಾಗ ನಮ್ಮಮ್ಮನ ಕೈಯಿಂದ ಫಲಾಹಾರ ಸೇವಿಸಿ ಮೈಸೂರಿನಲ್ಲಿರುವ ಅಣ್ಣನ ಮನೆಗೆ ಹೋಗಿ ಬೆಂಗಳೂರಿಗೆ ಬರುವುದು ವಾಡಿಕೆಯಾಗಿತ್ತು. ಪ್ರತೀ ವರ್ಷ ನಮ್ಮನ್ನೂ ಕರೆಯುತ್ತಿದ್ದರು. ನಮಗೆ ಹೋಗಲು ಆಗುತ್ತಿರಲಿಲ್ಲ. ಈ ವರ್ಷ ಕೋವಿಡ್ ಪರಿಸ್ಥಿತಿ ಇದ್ದರೂ ವಯಸ್ಸಾದವರು ಕರೆಯುತ್ತಿದ್ದಾರೆ ಎಂದು ಎಚ್ ಎನ್ ಆರ್, ನಾನು ಮತ್ತು ಜಿ. ಎಸ್.ಕೆ. ಒಟ್ಟಿಗೆ ಕಾರ್‌ನಲ್ಲಿ ಹೋಗಿ ಗರ್ಗೇಶ್ವರನ ದರ್ಶನ ಮಾಡಿ ಬಂದೆವು. ಯೋಗಾಯೋಗವೋ ಎಂಬಂತೆ ದೇವಸ್ಥಾನದ ಹೊಸ್ತಿಲ ಬಳಿ 96 ವರ್ಷದ ಅವರ ಹಿರಿಯಣ್ಣ ಪ್ರತ್ಯಕ್ಷ. ಅಣ್ಣನ ಕುಟುಂಬವೆಲ್ಲ ಪರಿಚಯವಾಯಿತು. ಯಥಾಪ್ರಕಾರ ಮೈಸೂರಿನ ನಮ್ಮ ತಾಯಿಯವರ ಭೇಟಿಯ ನಂತರ ಶ್ರೀ ಶಿವಾನಂದರ ನೂತನ ಗೃಹಕ್ಕೆ ತೆರಳಿ, ತಿಂಡಿ ತಿಂದು ಬೆಂಗಳೂರಿಗೆ ವಾಪಸ್ಸಾದೆವು. ಅವರೊಟ್ಟಿಗಿನ ಕಡೆಯ ಪ್ರವಾಸ ಇದೇ ಆಯಿತು. ನಾನು ಪ್ರವಾಸಕ್ಕೆ ತೆಗೆದುಕೊಂಡು ಹೋದ ಬುತ್ತಿಯೇ ಕಟ್ಟಕಡೆಯ ಬುತ್ತಿಯಾಯಿತು.

ನಿಷ್ಠೆಯ ಹೆಸರೇ ಕೃಷ್ಣಮೂರ್ತಿ. ಅನೇಕ ಸಂದರ್ಭಗಳಲ್ಲಿ GSK ರವರ ನಿಷ್ಠೆಯ ಮಟ್ಟವನ್ನು ನೋಡಿದ್ದೇನೆ.

ಸಂಘದ ವಿಷಯಕ್ಕೆ ಬಂದರೆ ಶ್ರೀ ನರಹರಿಯವರ ಬಗ್ಗೆ ಅಪಾರ ಗೌರವ, ಶ್ರದ್ಧೆ. ಅವರ ಕಾರ್ಯ ಚಟುವಟಿಕೆಯ ಬಗ್ಗೆ ತುಂಬಾ ನಿಷ್ಠೆಯಿತ್ತು. ಕೆಲವು ದುರ್ಘಟನೆಗಳು ಅವರ ಮನಸ್ಸಿಗೆ ತುಂಬಾ ನೋವು ಕೊಟ್ಟಿತ್ತು. ಈ ಬಗ್ಗೆ ಮನೆಗೆ ಬಂದಾಗ ಎಚ್.ಎನ್.ಆರ್. ಮತ್ತು ನನ್ನೊಡನೆ ಅವರ ಮನಸ್ಸಿನ ನೋವನ್ನು ತೋಡಿಕೊಂಡಿದ್ದರು. ಅನೌಪಚಾರಿಕವಾಗಿ ನಮ್ಮ ನಮ್ಮಲ್ಲಿ ಮಾತುಕತೆ ನಡೆಯುತ್ತಿತ್ತು.

ನೇರ ವ್ಯಕ್ತಿತ್ವದ ನಾನು "ಸಂಘದ ಹಿತದೃಷ್ಟಿಯಿಂದ ಸಂಬಂಧಪಟ್ಟವರಿಗೆ ನೀವು ಹೇಳಬಹುದಿತ್ತು" ಎಂದರೆ "ಹಾಗೆಲ್ಲ ಹೇಳಬಾರದು. ಅವರಿಗೇ ತಿಳುವಳಿಕೆ ಬಂದು ತಿದ್ದಿಕೊಳ್ಳುತ್ತಾರೆ" ಎಂದಷ್ಟೇ ಹೇಳುತ್ತಿದ್ದರು. ಸಂಘದ ಹಣಕಾಸಿನ ವಿಷಯದಲ್ಲಿಯೂ ಅವರಿಗೆ ಅಪಾರ ಕಾಳಜಿ. ನಾಗರಹಾವಿನ ರೀತಿ ಸಂಘಟನೆಯ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು. ಆದರೆ ಸಂಘಕ್ಕಾಗಿ ಮಾತ್ರ ತಮ್ಮ ದುಡ್ಡನ್ನು ಮಾತ್ರ ಯಾವುದೇ ಯೋಚನೆ ಮಾಡದೇ ನೀರಿನಂತೆ ಧಾರಾಳವಾಗಿ ಖರ್ಚು ಮಾಡುತ್ತಿದ್ದರು.

ಶಿಕ್ಷಕ ಸಂಘವೇ ಅವರ ಏಕನಿಷ್ಠೆಯಾಗಿತ್ತು. ತಮ್ಮ ಮನಸ್ಸು ಬುದ್ಧಿ, ಶರೀರ ಎಲ್ಲವೂ ಸಂಘಕ್ಕೆ ಸಮರ್ಪಿತ ಎನ್ನುತ್ತಿದ್ದರು. ಇಂತಹ ನಿಷ್ಠಾವಂತ ಸ್ವಯಂಸೇವಕರನ್ನು ಪಡೆದ ನಾವೇ ಧನ್ಯರು. ಸಂಘ ನಿಷ್ಠೆಯ ಮೂಲಕ ಪ್ರಚಾರಕರಂತೆ ದೇಶಸೇವೆಯನ್ನು ಮಾಡುತ್ತಿದ್ದರು. ಜಿಎಸ್‌ಕೆ ಅವರ ನಿಷ್ಠೆಯೇ ನಮಗೆಲ್ಲಾ ದಾರಿದೀಪ. ಈ ದೀಪದ ಬೆಳಕಿನಲ್ಲಿ ನಡೆಯುವುದೇ ನಾವೆಲ್ಲಾ ಕಾರ್ಯಕರ್ತರು ಅವರಿಗೆ ಸಲ್ಲಿಸುವ ನೈಜ ಶ್ರದ್ಧಾಂಜಲಿ.

GSK ನಿಮಗಿದೋ ಶತ ಶತ ನಮನ.

●

➢ ಪುಟ 3 ರಿಂದ.....

ಅಂತಾರಾಷ್ಟ್ರೀಯ ಒಕ್ಕೂಟ. ಇದಕ್ಕೆ ಸಮ್ಮಿಳಿತವಾಗಿದ್ದ ಕೆನೆಡಿಯನ್ ಟೀಚರ್ಸ್ ಫೆಡರೇಷನ್ (CTF) ಜೊತೆಗೆ ಅನೇಕ ಕಾರ್ಯಾಗಾರಗಳು, ಸಿಂಪೋಸಿಯಂಗಳ ಪ್ರಾಜೆಕ್ಟ್‌ಗಳನ್ನು ನಮ್ಮ ಶಿಕ್ಷಕ ಸಂಘ ಏರ್ಪಡಿಸುತ್ತಿತ್ತು. ಆ ಎಲ್ಲ ಕಾರ್ಯಕ್ರಮಗಳ ಯೋಜನೆ ಮತ್ತು ನಿರ್ವಹಣೆಯಲ್ಲಿ ಶ್ರೀ ಜಿಎಸ್‌ಕೆ ಪಾತ್ರ ತುಂಬಾ ಇರುತ್ತಿತ್ತು. ಶ್ರೀ ಜಿಎಸ್‌ಕೆ ಅವರ ಕಾರ್ಯತತ್ಪರತೆ, ಸೌಜನ್ಯ ಬದ್ಧತೆಗಳು ಹೊರಗಿನಿಂದ ಬಂದ ಸಂಪನ್ಮೂಲ ವ್ಯಕ್ತಿಗಳ ಮೇಲೆ ವಿಶೇಷ ಪ್ರಭಾವ ಬೀರಿದ್ದವು. ಕೆನಡಾದ ಸಂಪನ್ಮೂಲ ವ್ಯಕ್ತಿಯೊಬ್ಬರು ಭಾರತದಿಂದ ಹಿಂತಿರುಗಿದ ನಂತರ ನನಗೆ ಬರೆದಿದ್ದ ಪತ್ರದಲ್ಲಿ "After returned to my country from India I have become a completely changed man" ಎಂದು ತಮ್ಮ ಪ್ರತಿಕ್ರಿಯೆಯನ್ನು ಹಂಚಿಕೊಂಡಿದ್ದರು.

ಒಟ್ಟಿನಲ್ಲಿ ಶ್ರೀ ಜಿಎಸ್‌ಕೆ ನಿಸ್ವಾರ್ಥ, ನಿರಪೇಕ್ಷ, ಶುದ್ಧ ಸೇವಾಭಾವದಿಂದ ಕರ್ತವ್ಯಗಳನ್ನು ನಿರ್ವಹಿಸಿ ಶಿಕ್ಷಕ ಸಂಘಕ್ಕೆ ಅಷ್ಟೇ ಅಲ್ಲ. ನಮ್ಮೆಲ್ಲರಿಗೂ ಸಮಾಜಮುಖಿ ಚಟುವಟಿಕೆಗಳನ್ನು ಪ್ರಾಂಜಲ ಮನಸ್ಸಿನಿಂದ ನಡೆಸಲು ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಅನುಕರಣೀಯ ವ್ಯಕ್ತಿಯಾಗಿದ್ದರು.

●

# ಸ್ಥಿತಪ್ರಜ್ಞ ಜಿ. ಎಸ್. ಕೃಷ್ಣಮೂರ್ತಿ

ಶ್ರೀ ಶಿವಾನಂದ ಸಿಂಧನಕೇರಾ
ಪ್ರಧಾನ ಕಾರ್ಯದರ್ಶಿಗಳು, ಎಬಿಆರ್ಎಸ್ಎಂ

1998 ರಲ್ಲಿ ಮೈಸೂರು ಜಿಲ್ಲೆಯ ಜವಾಬ್ದಾರಿ ಬಂದ ನಂತರ ಪ್ರೀತಿಯ ಜಿಎಸ್‌ಕೆಯವರ ಜೊತೆಗೆ ಒಡನಾಟ. ಶಿಕ್ಷಕ ಸಂಘದ ಚಟುವಟಿಕೆಗಳಿಗೆ ನಿರಂತರವಾಗಿ ಪ್ರೋತ್ಸಾಹ ನೀಡುತ್ತಾ ಬಂದವರು. ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಇರುವ ನಮ್ಮ ಕೇಂದ್ರ ಕಛೇರಿಗೆ ಬಂದಾಗಲೆಲ್ಲಾ ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದರು. ಶಿಕ್ಷಕ ಸಂಘದ ಮೂಲಕ ರಾಷ್ಟ್ರೀಯ ವಿಚಾರಗಳನ್ನು ನೂರಾರು ಶಿಕ್ಷಕರಿಗೆ ತಲುಪಿಸಲು ಜೀವನ ಸವೆಸಿದವರು ಒಂದು ಧ್ಯೇಯಕ್ಕಾಗಿ ಜೀವನ ಮುಡಿಪಾಗಿಟ್ಟವರು.

ಜಿಎಸ್‌ಕೆರವರು ಶಿಕ್ಷಕ ವೃತ್ತಿಯನ್ನು ತುಂಬಾ ಪ್ರೀತಿಸುತ್ತಿದ್ದವರು. ಇಂಗ್ಲೀಷ್ ದೈನಿಕ ಪತ್ರಿಕೆಯಾದ ದಿ ಹಿಂದೂ ಪತ್ರಿಕೆ ದಶಕಗಳ ಕಾಲದಿಂದ ಪತ್ರಿಕೆಯ ಎಲ್ಲಾ ಪುಟಗಳನ್ನು ಓದಿ, ಅದರಲ್ಲಿರುವ ವಿಶೇಷವಾದ ಜ್ಞಾನವನ್ನು ಹಂಚಿಕೊಳ್ಳುತ್ತಿದ್ದರು. ಜಿಎಸ್‌ಕೆಯವರಿಗೆ ಯಾವುದೇ ವಿಷಯದ ಬಗ್ಗೆ ಕೇಳಿದರೆ ಅದರ ಬಗ್ಗೆ ತಮಗೆ ತಿಳಿದಿರುವ ಮತ್ತು ಗೊತ್ತಿರುವ ಮಾಹಿತಿಯನ್ನು ನೀಡುತ್ತಿದ್ದರು. ಯಾವುದಾದರೂ ವಿಶೇಷ ಲೇಖನವನ್ನು ಪತ್ರಿಕೆಯಲ್ಲಿ ಗಮನಿಸಿದರೆ ಅದನ್ನು ಶಿಕ್ಷಕ ಸಮಾಚಾರ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಕಳೆದ 35 ವರ್ಷಗಳಿಂದ ಶಿಕ್ಷಕ ಸಮಾಚಾರ ಪತ್ರಿಕೆ ನಿರಂತರವಾಗಿ ಪ್ರಕಟವಾಗಲು ಕಾರಣೀಭೂತರು.

ಜಿಎಸ್‌ಕೆಯವರ ಜೀವನದ ರೀತಿ ನಮಗೆಲ್ಲಾ ಪಾಠ, ಅವರು ಜೀವನದಲ್ಲಿ ಏನನ್ನೂ ಬಯಸಿದವರಲ್ಲ, ಕೊನೆ ಉಸಿರಿರುವವರೆಗೂ ಶಿಕ್ಷಕ ಸಂಘವೇ ಅವರ ಉಸಿರಾಗಿತ್ತು.

2021 ಮಾರ್ಚ್‌ನಲ್ಲಿ ಜಿಎಸ್‌ಕೆ ಮತ್ತು ಹೆಚ್‌ಎನ್‌ಆರ್ ಮತ್ತು ಸೀತಾಲಕ್ಷ್ಮಿ ಮೂವರು ಜೊತೆಗೂಡಿ ಬೆಂಗಳೂರಿನಿಂದ ಜಿಎಸ್‌ಕೆ ಅವರ ಹುಟ್ಟೂರಾದ ತಿರುಮಕೂಡಲ ನರಸೀಪುರ (ಟಿ ನರಸೀಪುರ) ತಾಲ್ಲೂಕಿನ ಗರ್ಗೇಶ್ವರಿಗೆ ಮಹಾಶಿವರಾತ್ರಿಯಂದು ಈಶ್ವರನ ದರ್ಶನಕ್ಕಾಗಿ ಹೋಗಿದ್ದರು. ಪ್ರತಿವರ್ಷ ತಪ್ಪದೇ ಶಿವರಾತ್ರಿಯಂದು ಗರ್ಗೇಶ್ವರಿಯ ದರ್ಶನ ಪಡೆಯುತ್ತಿದ್ದರು. ಈ ವರ್ಷದ ಅದೇ ದಿನ ಮೈಸೂರಿನ  ನಮ್ಮ ಮನೆಗೆ ಬಂದಿದ್ದರು. ನಮ್ಮ ಮನೆಯ ಕೊನೆ ಭೇಟಿ ಅದು. ಅಂದು ಒಂದು ಮಾತು ಹೇಳಿದ್ದು ನೆನಪಿಗೆ ಬರುತ್ತಿದ್ದು, ಜಿಎಸ್‌ಕೆಯವರು ಹೇಳಿದ್ದು – ಪ್ರಾಯಶಃ ಮುಂದಿನ ವರ್ಷ ನಾನು ಗರ್ಗೇಶ್ವರಿಗೆ ಬರುತ್ತೇನೋ ಇಲ್ಲವೋ ಗೊತ್ತಿಲ್ಲ ಅಂತ ಹೇಳಿದರು. ಅದು ನಿಜಕ್ಕೂ ಅದೇ ರೀತಿ ಆಗಿದ್ದೂ ಮನಸ್ಸಿಗೆ ಬಹಳ ವೇದನೆಯಾಯಿತು. ಮಾಜಿ ವಿಧಾನಪರಿಷತ್ ಸದಸ್ಯರಾಗಿರುವ ಶ್ರೀ ಬಾಲಕೃಷ್ಣಭಟ್ ಅವರು ನನಗೆ ಹೇಳಿದ್ದು ಒಂದು ಬಾರಿ ಜಿಎಸ್‌ಕೆಯವರ ಊರು ಗರ್ಗೇಶ್ವರಿಗೆ ಹೋಗಿ ಬರಬೇಕು ಅಂತ, ಕಾಕತಾಳಿಯವೆಂಬಂತೆ ಮಾರ್ಚ್ 16, 2021 ರಂದು ನಾನು ಮತ್ತು ಬಾಲಕೃಷ್ಣಭಟ್ ಸರ್ ಜತೆಗೂಡಿ ಹೋಗಿ ಜಿಎಸ್‌ಕೆಯವರ ಹುಟ್ಟೂರಿನ ಗರ್ಗೇಶ್ವರಿಯ ದರ್ಶನ ಪಡೆದು ಬಂದೆವು.

ಜಿಎಸ್‌ಕೆರವರು ಮೃದುಭಾಷಿ, ಯಾರ ಮನಸ್ಸಿಗೂ ನೋವು ಮಾಡದವರು, ಅವರಿಗೆ ನೀಡುವುದು ಮಾತ್ರ ಗೊತ್ತು. ಕೇಳುವುದು ಮತ್ತು ಬೇಡುವುದು ಗೊತ್ತಿರಲಿಲ್ಲ. ಕಷ್ಟದಲ್ಲಿ ಇನ್ನೊಬ್ಬರಿಗೆ ನೆರವಾದವರು, ಕಿರಿಯರನ್ನು ಅಷ್ಟೇ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಸಭೆಯಲ್ಲಿ ಹಿಂದಿನ ಸಾಲಿನಲ್ಲಿ ಕುಳಿತು, ಎಲ್ಲವನ್ನೂ ಗಮನಿಸಿ, ಸಮಯಕ್ಕೆ ಏನನ್ನು ಹೇಳಬೇಕು ಅಷ್ಟನ್ನೇ ತಿಳಿಸುತ್ತಿದ್ದರು. ಈ ಜೀವನದ ಯಾತ್ರೆಯಲ್ಲಿ ರಾಷ್ಟ್ರದ ಬಗೆಗೆ ಚಿಂತಿಸುತ್ತಾ ಸ್ಥಿತಪ್ರಜ್ಞರಂತೆ ಬದುಕಿದರು. ●

# ನಾನು ಕಂಡ ಜಿ.ಎಸ್. ಕೃಷ್ಣಮೂರ್ತಿಜಿ

ಶ್ರೀ ಜೆ.ಎಂ ಜೋಶಿ
ರಾಜ್ಯ ಖಜಾಂಚಿ, ಕೆ.ಆರ್.ಎಂ.ಎಸ್.ಎಸ್

ಗರ್ಗೇಶ್ವರಿ ಸುಬ್ಬರಾವ್ ಕೃಷ್ಣಮೂರ್ತಿಯವರು ಒಬ್ಬ ಸಜ್ಜನ ಶಿಕ್ಷಕ, ಪೂರ್ಣಾವಧಿ ಕಾರ್ಯಕರ್ತ, ಉತ್ತಮ ಮಾರ್ಗದರ್ಶಿ, ಹವ್ಯಾಸಿ ಪತ್ರಕರ್ತ, ಶಿಕ್ಷಣ ತಜ್ಞ ಹೀಗೆ ಬಹುಮುಖ ವ್ಯಕ್ತಿತ್ವವನ್ನು ಇವರಲ್ಲಿ ಕಾಣಬಹುದಾಗಿತ್ತು. ಶಿಕ್ಷಕರ ನೋವು ನಲಿವುಗಳಲ್ಲಿ ಪಾಲ್ಗೊಳ್ಳುವ ಮನೋಭಾವವುಳ್ಳವರಾಗಿದ್ದರು. ಒಟ್ಟಾರೆ ಶಿಕ್ಷಕರಿಗೆ ಆದರ್ಶಪ್ರಾಯರಾಗಿದ್ದರು.

ಶಿಕ್ಷಕ ಮಿತ್ರರ ಸಮಸ್ಯೆಗಳಿದ್ದಾಗ ಶಿಕ್ಷಕರ ಕಣ್ಮಣಿ ಶ್ರೀಯುತ ನರಹರಿಯವರ ಮೂಲಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿದ್ದವು. ಹೀಗೆಯೇ ಪರಿಚಯವಾಗುತ್ತ ಶಿಕ್ಷಕ ಸಂಘದೊಡನೆ ಒಡನಾಟ ಪ್ರಾರಂಭವಾಯಿತು. ನಮ್ಮ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರೊಫೆಶನಲ್ ಡೆವಲಪ್‌ಮೆಂಟ್ ಸೆಂಟರ್ ಮೂಲಕ ಶಿಕ್ಷಕರ ಪುನಃಶ್ಚೇತನ ಕಾರ್ಯಾಗಾರದಲ್ಲಿ ಮೊದಲು ಜಿ ಎಸ್ ಕೆ ಅವರನ್ನು ನೋಡಿದಾಗ, ಆತ್ಮೀಯತೆಯಿಂದ ಮಾತನಾಡಿಸಿದ್ದರು.

ಬೆಂಗಳೂರು ನಗರ ಜಿಲ್ಲಾ ಘಟಕದವರು ಆಯೋಜಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತ ಜಿಎಸ್‌ಕೆಯವರ ಸಹವಾಸ ಪ್ರಾರಂಭವಾಯಿತು. ಅವರ ಸರಳತೆ, ಹಿತಮಿತವಾದ ಮಾತುಗಳು ಶಿಕ್ಷಕರನ್ನು ಆಕರ್ಷಿಸುತ್ತಿದ್ದವು. ನಾನು ಸಂಘದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಲು ಕಾರಣೀಭೂತರಾದವರಲ್ಲಿ ಜಿಎಸ್‌ಕೆಯವರ ಪಾತ್ರವೂ ಇದೆ. ಶಿಕ್ಷಕ ಸಂಘದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಉತ್ತಮವಾದ ಸಲಹೆ, ಸಹಕಾರಗಳ ಜೊತೆಗೆ ಮುಕ್ತ ಅವಕಾಶಗಳನ್ನು ನೀಡುತ್ತಿದ್ದರು. ಸಂಘದ ಕಾರ್ಯಕ್ರಮಗಳಲ್ಲಿ ಎಂದೂ ವೇದಿಕೆಯಲ್ಲಿ ಕುಳಿತುಕೊಳ್ಳುವುದನ್ನು ಅಪೇಕ್ಷಿಸದೇ ಇಡೀ ಕಾರ್ಯಕ್ರಮವನ್ನು ಅವಲೋಕನ ಮಾಡುತ್ತಿದ್ದರು ಮತ್ತು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ ಕಾರ್ಯಕರ್ತರಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ಎಲ್ಲ ಜಿಲ್ಲೆಗಳ ಕಾರ್ಯಕರ್ತರಿಗೆ ಜಿಎಸ್‌ಕೆಯವರು ಆತ್ಮೀಯರು. ಹಲವು ಕಾರ್ಯಕರ್ತರ ಕುಟುಂಬದವರನ್ನು ಅವರು ಬಲ್ಲರು. ಎಲ್ಲರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಸಂಘದ ಬೆಳವಣಿಗೆಯಲ್ಲಿ ಕಾರ್ಯಕರ್ತರು ಪ್ರಮುಖ ಆಧಾರಸ್ತಂಭ ಎಂದು ಹೇಳುತ್ತಿದ್ದರು.

ಇತ್ತೀಚಿನ ಕೊರೊನಾ ಸಂದರ್ಭದಲ್ಲಿ ನಾವೆಲ್ಲಾ ಕಾರ್ಯಕರ್ತರು ಅವರ ಆರೋಗ್ಯದ ಬಗ್ಗೆ ವಿಚಾರಿಸಿದರೆ "I am fine" ನೀವು ಹೇಗಿದ್ದೀರಾ? ಎಂದು ಕೇಳುತ್ತಿದ್ದರು. ತಮ್ಮ ನೋವನ್ನು ತೋರ್ಪಡಿಸದೇ ಕಾರ್ಯಕರ್ತರ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಿದ್ದ ಹಿರಿಯರು ನಮ್ಮನ್ನಗಲಿದ್ದಾರೆ ಎಂಬುದೇ ಅರಗಿಸಕೊಳ್ಳಲಾಗದು. ಜಿಎಸ್‌ಕೆಯವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ನೀಡಲೆಂದು ನನ್ನ ಆತ್ಮೀಯ ನಮನವನ್ನು ಸಲ್ಲಿಸುತ್ತಿದ್ದೇನೆ. ●

# ನಾವೂ ಹೀಗಾಗಬಹುದೇ?

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಆದರ್ಶವ್ಯಕ್ತಿಗಳೆಂದು ಕೆಲವರನ್ನು ಗುರುತಿಸಿಕೊಳ್ಳುತ್ತೇವೆ. ಪುರಾಣ ಕಥೆಗಳಲ್ಲಿಯೋ, ಇತಿಹಾಸದ ಪುಟಗಳಲ್ಲಿಯೋ ನಮ್ಮ ಹಿರಿಯರ ಮೂಲಕವೋ ಹೀಗೆ ಗುರುತಿಸಿದವರ ವ್ಯಕ್ತಿತ್ವದಿಂದ ಪ್ರಭಾವಿತರಾಗುತ್ತೇವೆ. ನಾವು ಅವರ ಗುಣ, ಸ್ವಭಾವಗಳನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಸ್ವಲ್ಪಮಟ್ಟಿಗೆ ಯಶಸ್ವಿಯೂ ಆಗಬಹುದೇನೋ. ಆದರೆ, ಮತ್ತೆ ಕೆಲವರನ್ನು ಎದುರಿಗೇ ನೋಡುತ್ತಿದ್ದು, ಅವರ ಗುಣ, ಸ್ವಭಾವಗಳಲ್ಲಿನ ವಿಶೇಷಗಳನ್ನು ಕಾಣುತ್ತಿದ್ದರೂ ಅವುಗಳನ್ನು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಅವರ ನಡೆ–ನುಡಿಗಳೆಲ್ಲವೂ ತುಂಬ ಸಹಜವೆನಿಸಿಬಿಟ್ಟಿರುತ್ತದೆ. ಆದರೆ ಗಂಭೀರವಾಗಿ ಆಲೋಚನೆ ಮಾಡಿದಾಗ ಇತರರಿಗಿಂತ ಅವರೆಷ್ಟು ಭಿನ್ನರಾಗಿದ್ದಾರೆಂಬುದು ಅರ್ಥವಾಗುತ್ತದೆ, ಮನದಟ್ಟಾಗುತ್ತದೆ. ಏಕೆಂದರೆ, ಅವರೆಂದೂ ಹತ್ತು ಜನರ ನಡುವೆ ತಮ್ಮನ್ನು ಮುಂಚೂಣಿಯಲ್ಲಿಯೋ, ಪ್ರಧಾನವಾಗಿಯೋ ತೋರ್ಪಡಿಸಿಕೊಳ್ಳಲು ಬಯಸುವುದೇ ಇಲ್ಲ. ಅದವರಿಗೆ ಮಹತ್ವದ್ದೆಂದೂ, ಅಗತ್ಯವಾದುದೆಂದೂ ಅನಿಸುವುದೇ ಇಲ್ಲ. ಅವರಿಗೆ ಯಾರ ಪ್ರಶಂಸೆಯಾಗಲೀ, ಮೆಚ್ಚಿಗೆಯಾಗಲೀ ಬೇಕಾಗಿರುವುದಿಲ್ಲ. ತಮ್ಮಷ್ಟಕ್ಕೆ ತಮಗೆ ತೋರಿದ ದಾರಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಕರ್ತವ್ಯಪ್ರಜ್ಞೆ ಅವರಲ್ಲಿ ಸದಾ ಜಾಗೃತವಾಗಿರುತ್ತದೆ. ನಿಸ್ವಾರ್ಥ ಮನೋಭಾವ, ಪ್ರತಿಫಲಾಪೇಕ್ಷೆಯಿಲ್ಲದ ಸ್ವಭಾವ ಅವರದ್ದಾಗಿರುತ್ತದೆ. 'ಕರ್ಮಯೋಗಿ' ಎಂದರೆ ಹಾಗೇ ತಾನೇ? ಇವರನ್ನೇ 'ಅಪರೂಪದವರು' ಎನ್ನುವುದು.

ದಿ.ಜಿ.ಎಸ್.ಕೃಷ್ಣಮೂರ್ತಿಸರ್ ಇಂತಹ ಅಪರೂಪದ ವ್ಯಕ್ತಿಗಳ ಸಾಲಿಗೆ ಸಲ್ಲುವವರು. ದಿನಾಂಕ 21–08–2021 ರಂದು ತಮ್ಮ ಎಂಬತ್ತೂರು ವರ್ಷಗಳ ಬದುಕಿನ ಪಯಣವನ್ನು ಪೂರೈಸಿದ ಜಿ.ಎಸ್.ಕೆ ಸರ್ (ಎಲ್ಲರೂ ಮಾಧ್ಯಮಿಕ ಶಿಕ್ಷಕ ಸಂಘದಲ್ಲಿ ಅವರನ್ನು ಹಾಗೆಯೇ ಕರೆಯುತ್ತಿದ್ದುದು) ಒಬ್ಬ ಕರ್ಮಯೋಗಿಯಂತೆಯೇ ಬದುಕಿದವರು. ವಿದ್ಯಾರ್ಥಿಗಳಿಗೆ ಪ್ರಿಯ ಶಿಕ್ಷಕರಾಗಿದ್ದವರು. ಶಿಕ್ಷಕ ಬಂಧುಗಳ ವಯೋಮಾನಕ್ಕೆ ತಕ್ಕಂತೆ ಸಹೃದಯ ಮಿತ್ರರಾಗಿ ಸ್ಪಂದಿಸುತ್ತ, ಹಿರಿಯಣ್ಣನಾಗಿ ಮಾರ್ಗದರ್ಶನ ನೀಡುತ್ತ, ಹಿತಚಿಂತಕರಾಗಿ ನೆರವಾಗುತ್ತ ಎಲ್ಲರೊಡನೆ ಆತ್ಮೀಯವಾಗಿ ಬೆರೆಯುತ್ತಿದ್ದವರು.

ಜಿ.ಎಸ್.ಕೆ. ಸರ್ ಅವರ ನಡೆ–ನುಡಿ ಎಲ್ಲವೂ ಹಿತ ಮಿತ. ಅಂತಃಕರಣದೊಂದಿಗೆ ಎಲ್ಲರೊಡನೆ ವ್ಯವಹರಿಸುತ್ತಿದ್ದ ಹೃದಯಶ್ರೀಮಂತಿಕೆ ಅವರದಾಗಿತ್ತು. ಸೌಜನ್ಯದ ಪ್ರತಿರೂಪವೇ ಅವರಾಗಿದ್ದರು. ಮಾಧ್ಯಮಿಕ ಶಿಕ್ಷಕಸಂಘದ ಕಾರ್ಯಾಲಯದ ಜೀವನಾಡಿಯೇ ಆಗಿದ್ದರು. ಅಷ್ಟೇ ಅಲ್ಲ, 'ಯಾದವಸ್ಮೃತಿ' ಕಟ್ಟಡದಲ್ಲಿನ ಎಲ್ಲ ವಿಭಾಗಗಳ ಕಾರ್ಯಕರ್ತರ ಪಾಲಿಗೆ ಅತ್ಯಂತ ಗೌರವಾನ್ವಿತ, ಪ್ರೀತಿಪಾತ್ರರಾದ ವ್ಯಕ್ತಿಯಾಗಿದ್ದರು.

ಸಂಘಟನಾ ಕಾರ್ಯದ ಒಂದು ಬಹುಮುಖ್ಯ ಲಕ್ಷಣವಾದ ಉತ್ತಮ 'ಶ್ರೋತೃ'ವೆನಿಸಿಕೊಂಡಿದ್ದರು. ಜಿ.ಎಸ್.ಕೆ. ಸರ್ ಕಾರ್ಯಾಲಯಕ್ಕೆ ಬರುತ್ತಿದ್ದ ಪ್ರತಿಯೊಬ್ಬ ಶಿಕ್ಷಕರಿಗೆ ಅದು ತಾಯಿಯ ಮನೆಯಂತೆ ವಾತ್ಸಲ್ಯದ ನಿಲಯವೇ ಆಗಿರಲು ಕಾರಣ ಜಿ.ಎಸ್.ಕೆ ಸರ್ ಎಲ್ಲರೊಡನೆ ಬೆಳೆಸಿಕೊಂಡಿದ್ದ ಆತ್ಮೀಯ ಅನುಬಂಧವೇ ಆಗಿತ್ತು. ಅವರೆಲ್ಲರ ಅನುಭವಕ್ಕೆ ತಾಯಿಯ ಮಮತೆ, ತಂದೆಯ ಕಾಳಜಿ ಮಾತ್ರವಲ್ಲ, ಗೆಳೆಯನ ಪ್ರೀತಿ, ಹಿತೈಷಿ ಹಿರಿಯರ ಮಾರ್ಗದರ್ಶನ ಎಲ್ಲವೂ ಸಿಕ್ಕುತ್ತಿತ್ತು. ಈ ಎಲ್ಲವನ್ನು ನೀಡುತ್ತಿದ್ದವರು, ಜಿ.ಎಸ್.ಕೆ.ಸರ್. ಆದರೆ ಎಲ್ಲವೂ ತುಂಬ ಸಹಜವಾಗಿಯೇ ನಡೆದುಹೋಗುತ್ತಿತ್ತು. ಯಾರೊಂದಿಗೂ ಹೆಚ್ಚಿಲ್ಲ, ಕಡಿಮೆಯಿಲ್ಲದಂತೆ.

ಒಮ್ಮೆ ಕಾರ್ಯಾಲಯಕ್ಕೆ ಹೋಗಿದ್ದಾಗ ಅಲ್ಲಿದ್ದ ಪುಸ್ತಕಗಳ ಕಪಾಟಿನಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರೊಬ್ಬರ ಫೋಟೋ ನೋಡಿದ್ದೆ. ಅವರ ಬಗ್ಗೆ ಕೇಳಿದಾಗ ಜಿ.ಎಸ್.ಕೆ ಸರ್, ಅದು ತಮ್ಮ ಗುರುಗಳ ಫೋಟೋ ಎಂದು ಹೇಳಿ, ಸಂಕ್ಷಿಪ್ತವಾಗಿ ಅವರ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದ್ದರು. ಆಗ ನಾನು "ಅವರ ಬಗ್ಗೆ ಒಂದು ಲೇಖನವನ್ನು ಬರೆಯಬಹುದಲ್ಲವೇ? ಇಷ್ಟೊಂದು ಸೇವಾಕಾರ್ಯಗಳನ್ನು ಮಾಡಿದ್ದಾರೆಂಬುದು ಎಲ್ಲರಿಗೂ ತಿಳಿಯುತ್ತದಲ್ಲವೇ" ಎಂದಿದ್ದೆ. ಅದಕ್ಕೆ ಅವರು ಉತ್ತರಿಸಿದ್ದು ಹೀಗೆ. " ಬೇಡ, ನಮ್ಮ ಸಂಘದವರು ಯಾರೂ ಪ್ರಚಾರಪ್ರಿಯರಲ್ಲ. ಅವರಿಗೆ ಇಷ್ಟವಾಗುವುದಿಲ್ಲ. ಎಲೆಮರೆಯ ಕಾಯಿಯಂತೆ ಇದ್ದು ಸಮಾಜಸೇವೆ, ದೇಶಸೇವೆ ಮಾಡಬೇಕೆನ್ನುವುದೇ ಸಂಘ ಎಲ್ಲರಿಗೂ ಕಲಿಸಿರುವ ಪಾಠ". ಸ್ವತಃ ಜಿ.ಎಸ್.ಕೆ.ಸರ್ ಇದ್ದದ್ದೂ ಹಾಗೆಯೇ. ರಾಜ್ಯದ ಮೂಲೆ ಮೂಲೆಗಳಿಂದ ಬರುತ್ತಿದ್ದ ಶಿಕ್ಷಕರೆಲ್ಲರ ಯೋಗಕ್ಷೇಮವನ್ನು ವಿಚಾರಿಸುತ್ತ, ಸಮಸ್ಯೆಗಳನ್ನು ಆಲಿಸುತ್ತಾ, ಪರಿಹಾರವನ್ನೋ, ಸಾಂತ್ವನವನ್ನೋ, ಸಲಹೆ–ಸೂಚನೆಗಳನ್ನು ನೀಡುತ್ತ ಸಮಾಧಾನದಿಂದ ಹಿಂತಿರುಗುವಂತೆ ಮಾಡುತ್ತಿದ್ದರು. ಅವರದು ಯಾವಾಗಲೂ ಹಿತ–ಮಿತ ಮತ್ತು ಖಚಿತ ನುಡಿಗಳೇ. ಹಿರಿಯ–ಕಿರಿಯರೆಂಬ ಭೇದವಿಲ್ಲದೆ ಎಲ್ಲರನ್ನೂ ಪ್ರೀತಿ, ವಿಶ್ವಾಸಗಳಿಂದ ಆದರಿಸುತ್ತಿದ್ದ ಸೌಜನ್ಯ ಅವರದು.

ಇಷ್ಟೊಂದು ಆದರ್ಶ ಗುಣಗಳು ಒಬ್ಬ ವ್ಯಕ್ತಿಯಲ್ಲಿ ಸಮಾವೇಶಗೊಳ್ಳುವುದು ಸಾಧ್ಯವೇ? ಸಾಧ್ಯವೆನ್ನುತ್ತಾರೆ ಜಿ.ಎಸ್.ಕೆ.ಸರ್ ಅವರನ್ನು ಬಲ್ಲ ಎಲ್ಲ ಗೆಳೆಯರು, ಬಂಧುಗಳು ಪರಿಚಿತರು ಮತ್ತು ಅವರ ವಿದ್ಯಾರ್ಥಿಗಳು. ವಿದ್ಯಾರ್ಥಿಯಾಗಿ ನಾನು ಕೂಡ ಅವರ ಈ ಸಹೃದಯ ವ್ಯಕ್ತಿತ್ವನ್ನು ಕಂಡಿದ್ದೇನೆ. ಶಿಕ್ಷಕ ಸಮಾಚಾರದ ಸಂಪಾದಕರ ಮಂಡಳಿಯ ಮಾಸಿಕ ಸಭೆಗಳಲ್ಲಿ ಅವರು ನೀಡುತ್ತಿದ್ದ ಮೌಲಿಕ ಸಲಹೆಗಳು, ವಿಚಾರಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದ ತೂಕದ ನುಡಿಗಳು ಎಲ್ಲವೂ ಅವರ ಬಗ್ಗೆ ಇದ್ದ ಗೌರವವನ್ನು ಮತ್ತಷ್ಟು ಹೆಚ್ಚಿಸುತ್ತಿದ್ದವು. ವೃತ್ತಿ, ಪ್ರವೃತ್ತಿ ಎರಡರಲ್ಲಿಯೂ ಸೇವಾವ್ರತಿಯ ನಿಯಮವನ್ನು ಶ್ರದ್ಧೆಯಿಂದ, ನಿಷ್ಠೆಯಿಂದ ಪಾಲಿಸಿಕೊಂಡು ಬಂದ ಜಿ.ಎಸ್.ಕೆ ಸರ್ ಸಮಾಜಕ್ಕಾಗಿಯೇ ತಮ್ಮ ಬದುಕನ್ನು ಅರ್ಪಿಸಿಕೊಂಡವರು. ಸಂಘದ ತತ್ವಗಳನ್ನು ಗೌರವಿಸುತ್ತ, ಕರ್ಮಯೋಗಿಯಾಗಿ ಎಲ್ಲರ ಆದರ್ಶವ್ಯಕ್ತಿಯಾಗಿ ಮನದಲ್ಲಿ ನಿಂತವರು.

ಇಂತಹ ಗೌರವಾನ್ವಿತ ಬದುಕು ನಡೆಸುವವರ ಸಾಲಿನಲ್ಲಿ ನಾವೂ ನಿಲ್ಲಬಹುದೇ? ಅದಕ್ಕಾಗಿ ಅವರು ನಡೆದ ದಾರಿಯಲ್ಲಿ ನಡೆಯುತ್ತ ಸ್ವಾರ್ಥ ದೂರವಾದ ಸಮಾಜಮುಖೀ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದೇ?

# ನನ್ನ ಪೂಜ್ಯ ತೀರ್ಥರೂಪರು

ಶ್ರೀಮತಿ ವರಲಕ್ಷ್ಮಿ
ಯಾದವಸ್ಮೃತಿ, ಶೇಷಾದ್ರಿಪುರಂ, ಬೆಂಗಳೂರು

**ಪರೋಪಕಾರಾಯ ಫಲಂತಿ ವೃಕ್ಷಾಃ ಪರೋಪಕಾರಾಯ ವಹಂತಿ ನದ್ಯಃ।**
**ಪರೋಪಕಾರಾಯ ದುಹಂತಿ ಗಾವಃ ಪರೋಪಕಾರಾರ್ಥಮಿದಂ ಶರೀರಂ॥**

ಪರೋಪಕಾರಕ್ಕಾಗಿಯೇ ಈ ಶರೀರವಿರುವುದು ಎಂಬಂತೆ ಬದುಕು ಸಾಗಿಸಿ 84 ಸಂವತ್ಸರಗಳನ್ನು ದಾಟಿ ಯಾರಿಂದಲೂ ಏನನ್ನೂ ಅಪೇಕ್ಷಿಸದೆ, ಪ್ರೀತಿ, ವಿಶ್ವಾಸಗಳನ್ನಷ್ಟೇ ಬಯಸಿದ ಮಹಾನ್ ಚೇತನ ನನ್ನ ತೀರ್ಥರೂಪು ಸಮಾನರಾದ ಪೂಜ್ಯ ಜಿ ಎಸ್ ಕೆ. ಅವರ ಬಗ್ಗೆ ಹೇಳುವುದಕ್ಕೆ ಸಾಗರಷ್ಟಿದೆ ನನ್ನ ತಲೆಯಲ್ಲಿ. ಆದರೆ ಯಾವುದನ್ನು ಪ್ರಸ್ತುತ ಪಡಿಸಬೇಕೆನ್ನುವ ತೀರ್ಮಾನಕ್ಕೆ ಬರುವುದು ಬಹಳ ಕಷ್ಟವಾದ ವಿಷಯ.

ನನಗೆ ಅವರ ಪರಿಚಯವಾಗಿ ಎಂಟು ವರ್ಷಗಳಾಗಿವೆ. ಆದರೆ ಎರಡೇ ವರ್ಷದಲ್ಲಿ ನನಗೆ ತಂದೆಯ ಸ್ಥಾನವನ್ನು ತುಂಬಿಬಿಟ್ಟರು. ಅವರು ಪ್ರೀತಿ, ಬಾಂಧವ್ಯ, ವಿಶ್ವಾಸ, ಸಂದರ್ಭೋಚಿತ ಚಿಂತನೆ, ಸಹಾಯ, ಜ್ಞಾನ, ಸಮಾಧಾನ, ಹೃದಯ ವೈಶಾಲ್ಯ ಇವೆಲ್ಲ ತುಂಬಿದ ಸಾಗರದಂತಿದ್ದರು. ಕಛೇರಿ ಕೆಲಸದ ಒತ್ತಡವಿದ್ದರೂ ಅವರ ಜೊತೆ ಅರ್ಧಗಂಟೆಯಾದರೂ ಸಮಯ ಮೀಸಲಿಡುತ್ತಿದ್ದೆ. ಅವರೂ ಅಷ್ಟೆ, ಆರೋಗ್ಯ ಸಮಸ್ಯೆ ಇದ್ದರೂ ನನ್ನ ಜೊತೆಯಲ್ಲಿ ಸಮಯ ವ್ಯಯಿಸಲು ಕಿಂಚಿತ್ತೂ ಬೇಸರಗೊಳ್ಳುತ್ತಿರಲಿಲ್ಲ. ಆರೋಗ್ಯ ಸಮಸ್ಯೆ ಎಂಬುದು ಯಾವತ್ತೂ ಅವರ ಸಂತೋಷಕ್ಕಾಗಲಿ, ಜ್ಞಾನಾಭಿವೃದ್ಧಿಗಾಗಲಿ ತೊಂದರೆ ಕೊಡದೆ ಆಪ್ತ ಸ್ನೇಹಿತನಾಗಿಬಿಟ್ಟಿತ್ತು.

ಸಂಕೋಚದ ಸ್ವಭಾವದವರಾಗಿದ್ದರೂ ತಮಗೆ ಏನು ಬೇಕಾದರೂ ನನ್ನ ಬಳಿ ಮಾತ್ರ ನೇರವಾಗಿ ಕೇಳುತ್ತಿದ್ದರು. ಅವರಿಗೆ ಮಾಡುವ ಸೇವೆ ಅಳಿಲಿನಷ್ಟಿದ್ದರು, ಬೆಟ್ಟದಷ್ಟು ಸ್ಮರಿಸುತ್ತಿದ್ದರು. ನನಗೆ ಇಲ್ಲಿಯವರೆಗೂ ನನ್ನ ವಯಸ್ಸಿನ ಸ್ನೇಹಿತರು ಇಲ್ಲ. ಆದರೆ ಒಂದು ಕ್ಷಣ ಅವರ ಮುಂದೆ ಮೌನವಾದರೂ ಹತ್ತು ಬಾರಿಯಾದರೂ "ಏನಾಯಿತಮ್ಮ, ಏನಾಯಿತಮ್ಮ ಡಾಕ್ಟರ್ ಹತ್ತಿರ ಹೋಗೋಣ ನಡಿ" ಎಂದು ಶರ್ಟು ಪ್ಯಾಂಟ್ ಧರಿಸಿ ಸಿದ್ಧವಾಗಿ ನಿಂತುಬಿಡುತ್ತಿದ್ದರು. ನನ್ನ ಒಂದು ಕ್ಷಣದ ಮೌನವನ್ನೂ ಅವರು ಸಹಿಸಿಕೊಳ್ಳುತ್ತಿರಲಿಲ್ಲ. ಇಷ್ಟು ಪ್ರೀತಿ ತೋರಿಸಲು ಸಾಮಾನ್ಯ ಮನುಷ್ಯರಿಂದ ಸಾಧ್ಯವೇ? ಅಷ್ಟು ಕಾಳಜಿ, ಪ್ರೀತಿ ತೋರುತ್ತಿದ್ದರು. ಯಾರ ಅಸಹಾಯಕತೆಯನ್ನೂ ದುರುಪಯೋಗಪಡಿಸಿಕೊಳ್ಳುತ್ತಿರಲಿಲ್ಲ. ಅಂತಹವರಿಗೆ ತನಗೆ ಧೈರ್ಯವನ್ನು ತುಂಬುತ್ತಿದ್ದರು.

ಸಂಘಟನೆಯ ಕೆಲಸವೆಂದರೆ ಅವರಿಗೆ ಭಗವಂತನ ಸೇವೆಯಿದ್ದಂತೆ. ತಮಗೆ ಅನಾರೋಗ್ಯವಿದ್ದಾಗಲೂ ಕಛೇರಿಯ ಕೆಲಸದ ಕಡೆ ಗಮನ ಹರಿಸುತ್ತಿದ್ದರು. ಕಛೇರಿಯ ಕೆಲಸಕ್ಕೆ ಹೊರಗೆ ಹೋಗಬೇಕೆಂದರೆ ಇಬ್ಬರೂ ಜೊತೆಯಲ್ಲಿಯೇ ಹೋಗುತ್ತಿದ್ದೆವು. "ನೀವು ಬೇಡ ಸರ್, ನಾನು ಹೋಗಿ ಕೆಲಸ ಮುಗಿಸಿ ಬರುತ್ತೇನೆ" ಎಂದರೂ "ಅವರು ನಾನು ಬರುತ್ತೇನಮ್ಮ" ಎಂದು ಸಿದ್ಧವಾಗಿ ನಿಂತುಬಿಡುತ್ತಿದ್ದರು. ನಾನು ಅವರ ಶ್ರದ್ಧೆಯನ್ನು ನೋಡಿ ಮೌನಕ್ಕೆ ಶರಣಾಗುತ್ತಿದ್ದೆ. ಎಷ್ಟೋ ಬಾರಿ ಕೆಲವು ಕಛೇರಿಗಳಲ್ಲಿ ಅವರನ್ನು ಕರೆದುಕೊಂಡು ಹೋಗಿದ್ದಕ್ಕೆ 'ಯಾಕಮ್ಮಾ ಇಷ್ಟು ವಯಸ್ಸಾಗಿರುವವರನ್ನು ಕರೆತಂದಿದ್ದೀರಾ? ಇವರನ್ನು ಇನ್ನೊಮ್ಮೆ ಕರೆದುಕೊಂಡು ಬರಬೇಡಿ' ಎಂದು ಗಡುಸು ಧ್ವನಿಯಲ್ಲಿ ಅವರ ಎದುರೇ ಬೈದು ಕಳುಹಿಸುತ್ತಿದ್ದರು. ಇಷ್ಟಾದರೂ ಛಲ ಬಿಡದ ತ್ರಿವಿಕ್ರಮನಂತೆ ಎಲ್ಲಾ ಕಡೆಯೂ ನನ್ನ ಜೊತೆ ತಾವೂ ಉಪಸ್ಥಿತರಿರುವುದನ್ನು ಒಂದು ದಿನವೂ ತಪ್ಪಿಸಲೇ ಇಲ್ಲ. ಅದವರ ಕಾರ್ಯನಿಷ್ಠೆಯಾಗಿತ್ತು.

ಗಂಗಾ ಜಲದ ಕಥೆ... ದೇಹ ತ್ಯಜಿಸುವ ಎರಡು ತಿಂಗಳ ಮುಂಚೆ ನನಗೆ ಹೇಳಿದ್ದರು. "ನೋಡಮ್ಮ ಏನೇನೋ ವ್ರತ, ಕಥೆ, ಪಾರಾಯಣ ಮಾಡುತ್ತೀಯಲ್ಲ, ಇವೆಲ್ಲವೂ ನಿನಗೆ ಪೂರ್ಣ ಫಲ ಕೊಡಬೇಕಾದರೆ ಗಂಗಾಜಲವನ್ನೇ ತೀರ್ಥವೆಂದು ನಿತ್ಯವೂ ಸ್ವೀಕರಿಸಬೇಕು. ಗಂಗಾ ಜಲ ಪೋಸ್ಟ್ ಆಫೀಸ್‌ನಲ್ಲಿ ಸಿಗುತ್ತೆ, ಮಾರಾಟಕ್ಕೆ ಇಟ್ಟಿರುತ್ತಾರೆ ತೆಗೆದುಕೊಂಡು ಹೋಗು ನಿನ್ನ ವ್ರತಾಚರಣೆಗೆ ಪೂರ್ಣಫಲ ದೊರೆಯುತ್ತದೆ' ಎಂದು. ಹಿಂದೂ ಸಂಸ್ಕಾರಗಳಲ್ಲಿ ಅವರಿಗೆ ಅಷ್ಟು ನಂಬಿಕೆ.

ಮೊಬೈಲ್ ಬಳಕೆಯಲ್ಲಂತೂ ಅವರು ಬಹಳ ಪರಿಣತರಾಗಿಬಿಟ್ಟಿದ್ದರು. ಹೊಸದನ್ನು ಕಲಿಯುವುದರಲ್ಲಿ ಅವರಿಗೆ ತುಂಬಾ ಆಸಕ್ತಿ ಇತ್ತು. ಆನ್‌ಲೈನ್ ಶಾಪಿಂಗ್, ಓಲಾ, ಊಬರ್ ಬುಕಿಂಗ್ ಮೆಸೇಜ್‌ಗಳನ್ನು, ಆಸಕ್ತಿಯ ವಿಷಯಗಳನ್ನು ಸಂಬಂಧಿಸಿದವರಿಗೆ ಫಾರ್ವರ್ಡ್ ಮಾಡುವುದು, ಎಲ್ಲವನ್ನೂ ಒಂದೇ ಸಲ ತೋರಿಸಿದರೆ ಸಾಕು ಮುಂದಿನ ಸಲದಿಂದ ಅವರೇ ಮಾಡಿಬಿಡುತ್ತಿದ್ದರು.

ಅವರ ಅಗಲಿಕೆಯ ಕಣ್ಣೀರು ಸಮುದ್ರದಷ್ಟಿದೆ. ಮನಸ್ಸಿನ ನೋವು ಬೆಟ್ಟದಷ್ಟಿದೆ. ಅನಾಥಭಾವ ಮೂಡಿದೆ. ಆದರೂ ಅವರ ಫೋಟೋ ಮುಂದೆ ನಿಂತು ಮಾತನಾಡಿದರೆ ಅವರೂ ನನ್ನೊಂದಿಗೆ ಮಾತನಾಡುವಂತೆ ಭಾಸವಾಗುತ್ತಿದೆ. ಅವರು ನನ್ನೊಂದಿಗೆ ಇದ್ದಾರೆ. ದೇಹ ಮಾತ್ರ ತ್ಯಜಿಸಿದ್ದಾರೆ ಅಷ್ಟೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುವೆ.

# ಮಿತ ಭಾಷಿ ಕೃಷ್ಣಮೂರ್ತಿ ಜೀ

ಶ್ರೀಯುತ ಚಿದಾನಂದ ಪಾಟೀಲ್
ಪ್ರಧಾನಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ

ನಾನು ಇಂದು ಸಾರ್ವಜನಿಕ ಜೀವನದಲ್ಲಿ ಉಳಿಯುವುದಕ್ಕೆ ಕಾರಣೀಕರ್ತರಾದ ಕೆಲವೇ ವ್ಯಕ್ತಿಗಳಲ್ಲಿ ಜಿ.ಎಸ್.ಕೃಷ್ಣಮೂರ್ತಿಯವರು ಒಬ್ಬರು.

ಅವರ ಅವಲೋಕನ ಮತ್ತು ನಿರ್ಧಾರ ಮಾಡುವ ರೀತಿ ನಮಗೆಲ್ಲಾ ಅನುಕರಣೀಯವಾದದ್ದು. ಸಂಘಕ್ಕೆ, ಸಮಾಜಕ್ಕೆ ಮತ್ತು ಸಂಘವನ್ನು ನಂಬಿದ ಕಾರ್ಯಕರ್ತನಿಗೆ ಮಾದರಿಯಾದ ವ್ಯಕ್ತಿ.

ಅವರೊಂದಿಗಿನ 16 ವರ್ಷಗಳ ಹತ್ತಿರದ ಒಡನಾಟ ಅನೇಕ ಪಾಠಗಳನ್ನು ಕಲಿಸಿದೆ. ಅವರಲ್ಲಿ ಇದ್ದ ಕನ್ನಡ ಮತ್ತು ಆಂಗ್ಲ ಭಾಷಾ ಜ್ಞಾನ ನಮಗೆಲ್ಲಾ ಪ್ರೇರಣಾದಾಯಕವಾಗಿತ್ತು. ಮಿತಭಾಷಿಯಾದರೂ, ಮಾತುಗಳು ಮಾತ್ರ ಯಾವ ಮುಲಾಜು ಇಲ್ಲದೇ ವಿಷಯಕ್ಕೆ ಅನುಗುಣವಾಗಿ ಇರುತ್ತಿದ್ದವು.

ಇಂದು ನಮ್ಮಿಂದ ಅವರು ದೂರವಾದರೂ ಅವರ ನಡೆ–ನುಡಿಗಳು ನಮಗೆಲ್ಲಾ ಮುಂದಿನ ದಾರಿ ತೋರುವಂತವುಗಳಾಗಿವೆ.

# ಮರೆಯಲಾಗದ ಮಾಣಿಕ್ಯ ಜಿ.ಎಸ್.ಕೆ ಸರ್

**ಗಂಗಾಧರಾಚಾರಿ ಎ.**
ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

ಮಾನವ ಭೂಮಿಗೆ ಬರುವಾಗ ತಂದೆತಾಯಿಗಳ ಅವಲಂಬನೆಯಿಂದ ಯಾವುದೇ ನಿರೀಕ್ಷೆಗಳಿಲ್ಲದೆ ಬರುತ್ತಾನೆ. ಆದರೆ ಹೋಗುವಾಗ ಮಾತ್ರ ಮುಪ್ಪಿನ ಕಾಲದಲ್ಲಿ ಅವನು ಮಕ್ಕಳಿಗೇ ಆಗಲಿ ಅಥವಾ ಇತರರಿಗೇ ಆಗಲಿ ಯಾವುದೇ ಅವಲಂಬನೆ/ತೊಂದರೆ/ ಹೊರೆಯಾಗದಂತೆ ದೈವಾಧೀನವಾಗುವ ನಿರೀಕ್ಷೆ ಇದ್ದೇ ಇರುತ್ತದೆ. ಅದಕ್ಕಾಗಿ ಜಪ-ತಪಗಳಿಂದ ದೇವರ ಮೊರೆ ಹೋಗುವುದು ಲೋಕಾರೂಢಿ, ಫಲ ಸಿಗುವುದು ಬಿಡುವುದು ಭಗವಂತನ ಇಚ್ಛೆ. ಮನುಷ್ಯ ಅಂದುಕೊಂಡಂತೆ ಫಲ ಸಿಕ್ಕರೆ ಪುಣ್ಯದ ಸಾವು ಎನ್ನುತ್ತೇವೆ, ಈ ಪೀಠಿಕೆಯನ್ನು ಏಕೆ ಬರೆಯುತ್ತಿದ್ದೇನೆಂದರೆ ನಮ್ಮ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯರಾದ ಜಿ.ಎಸ್.ಕೃಷ್ಣಮೂರ್ತಿರವರು ನಿರೀಕ್ಷಿಸಿದಂತೆ ಕಾಲವಾದವರು ಎನ್ನುವಂತಿದೆ. ಏಕೆಂದರೆ ಅವರು ಕೊನೆಯವರೆಗೂ ಕೂಡ ಯಾರಿಗೂ ತೊಂದರೆ ಕೊಡದೆ, ಅವಲಂಬಿಸದೆ ಇರಬೇಕೆಂದು ಬಯಸುತ್ತಿದ್ದ ಸ್ವಾಭಿಮಾನಿ. ಕೊನೆಗೂ ಯಾರಿಗೂ ಹೊರೆಯಾಗದೇ, ದೈವಾಧೀನರಾದರು. ಆದುದರಿಂದ ಅವರನ್ನು ನಾವು ಪುಣ್ಯವಂತರೆನ್ನುತ್ತೇವೆ.

ಒಬ್ಬ ಶಿಕ್ಷಕ ಬ್ರಹ್ಮಚಾರಿಯಾಗಿ ರಾಷ್ಟ್ರದ ಹಿತಕ್ಕಾಗಿ ಸಂಘದ ಸಿದ್ಧಾಂತವನ್ನು ಮೈ ಗೂಡಿಸಿಕೊಂಡು ಸಂಘದ ವಿಚಾರಕ್ಕೆ ಬದ್ಧರಾಗಿ ಕೊನೆಯ ಉಸಿರಿರುವರೆಗೂ ಉಪಾಸನೆ ಮಾಡುವುದು ಅಷ್ಟು ಸುಲಭದ ಮಾತಲ್ಲ. ಆದರೆ ಜಿ ಎಸ್ ಕೆ ರವರು ಕಳೆದ ಮೂರುವರೆ ದಶಕಗಳಿಂದ ಸಂಘದ ಸಂಪರ್ಕಕ್ಕೆ ಬಂದು, ಶಿಕ್ಷಕ ಸಂಘದ ಆಧಾರ ಸ್ತಂಭವಾಗಿದ್ದುಕೊಂಡು ಹಿರಿಯರಾದ ಕೃ. ನರಹರಿ ಜಿ ಅವರೊಂದಿಗೆ ಹೆಜ್ಜೆ ಹಾಕಿದವರು. ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಕೊನೆಯ ಕಾಲದವರೆಗೂ ಸಹ ಕಾರ್ಯಾಲಯದ ಪ್ರಮುಖರಾಗಿ ಹಲವಾರು ವರ್ಷಗಳವರೆಗೆ ಸೇವೆ ಸಲ್ಲಿಸಿದವರು, ಕೊನೆಯ ಬೈಠಕ್‌ನಲ್ಲಿ ಸಹ ಭಾಗವಹಿಸಿದವರು.

ನಾನು ಹಿರಿಯರಿಂದ ಹಾಗೂ ಜಿ.ಎಸ್.ಕೆರವರಿಂದ ತಿಳಿದುಕೊಂಡಂತೆ ಶಿಕ್ಷಕ ಸಂಘದ ಸಂಪರ್ಕಕ್ಕೆ ಬರುವ ಪೂರ್ವದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾಗ. ತಮ್ಮ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಕಲಿಸಿದ ಸಂಸ್ಕಾರ ಮತ್ತು ಜೀವನ ಶಿಕ್ಷಣದ ಅನುಭವಗಳು ನಮಗೂ ಮಾದರಿಯಾಗಿರುತ್ತವೆಂದು ಹೇಳುತ್ತಿದ್ದರು. ಶಿಕ್ಷಕ ಸಂಘದ ಬೆಳವಣಿಗೆಯ ದೃಷ್ಟಿಯಿಂದ ತಾವು ಮಾಡಿದ ಕಾರ್ಯದ ಅನುಭವಗಳನ್ನು ಸಹ ಹಲವು ಬಾರಿ ನಮ್ಮೊಂದಿಗೆ ಹಂಚಿಕೊಂಡಿದ್ದರು. ಅವರ ವಿಚಾರಗಳು ನಮ್ಮ ಸಂಘ ಕಾರ್ಯಕ್ಕೆ ಮೇಲ್ಪಂಕ್ತಿಯಾಗಿವೆ. ಅವರು ವೈಯಕ್ತಿಕ ಮೌಲ್ಯಗಳಿಗೆ ಮತ್ತು ರಾಷ್ಟ್ರೀಯ ಮೌಲ್ಯಗಳಿಗೆ ಬದ್ಧರಾಗಿ ಸಮಾಜ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡವರು.

ಅವರ ಗಂಭೀರ ವ್ಯಕ್ತಿತ್ವ ಮತ್ತು ಇನ್ಷರ್ಟ್ ಮಾಡಿದ ಉಡುಗೆ ಅವರಿಗಿದ್ದ ಇಂಗ್ಲೀಷ್ ಭಾಷೆಯ ನೈಪುಣ್ಯತೆ, ಮೇಲ್ನೋಟಕ್ಕೆ ನೋಡಿದರೆ, ಅವರೊಬ್ಬ ಬಿಗಿಯಾದ ಮೇಷ್ಟ್ರು ಎನ್ನುವುದರಲ್ಲಿ ಅನುಮಾನವಿಲ್ಲ, ಆದರೆ ಅವರು ಆಂತರಿಕವಾಗಿ ತುಂಬಾ ಮೃದು ಸ್ವಭಾವದವರಾಗಿದ್ದರು. ಒಮ್ಮೆ ಸಂಘದ ಕಾರ್ಯಕರ್ತನೆಂದು ಪರಿಚಯವಾದರೆ ಸಾಕು ತುಂಬಾ ಆಪ್ತರಾಗಿ ಬಿಡುತ್ತಿದ್ದವರು. ಕಾರ್ಯಾಲಯದಲ್ಲಿ ಕಾರ್ಯಕರ್ತರಿಗೆ ಸಂಘದ ಮನೆಯಂತೆ ಕಾಫಿ/ ಊಟ ನೀಡುತ್ತಾ, ಯೋಗಕ್ಷೇಮದ ಬಗ್ಗೆ ವಿಚಾರಿಸುತ್ತಾ, ಸಂಘದ ಕಾರ್ಯದ ಬಗ್ಗೆ ಚರ್ಚಿಸುತ್ತಾ, ಮಾರ್ಗದರ್ಶನ ಮಾಡುತ್ತಾ ಇರುತ್ತಿದ್ದರು. ಆಗ ಅವರ ಕೈಯಿಂದ ಮಾಡಿದ ಬಿಸಿ ಬಿಸಿ ಕಾಫಿ ಕುಡಿಯುವ ಭಾಗ್ಯ ನಮ್ಮದಾಗಿರುತ್ತಿತ್ತು.

ಅವರ ಶಿಸ್ತು, ಸ್ವಚ್ಛತೆ, ಪ್ರಾಮಾಣಿಕತೆ, ನುಡಿದಂತೆ ನಡೆ, ಕೆಲಸದಲ್ಲಿನ ಬದ್ಧತೆ, ಸರಳತೆ, ನಿರಾಪೇಕ್ಷೆ ಜೀವನ, ಇವುಗಳು ವೈಯಕ್ತಿಕ ಗುಣಗಳಾದರೆ, ಸಂಘದ ವಿಚಾರದಲ್ಲಿ ತಮಗೆ ಸರಿ ಎನಿಸಿದಲ್ಲಿ ಯಾರಿಗೂ ಕೂಡ ಅವರು ವೈಯಕ್ತಿಕವಾಗಿ ರಾಜಿಯಾಗುವ ವ್ಯಕ್ತಿತ್ವವೇ ಅವರದಲ್ಲ. ಆದರೂ ಸಂಘದ ಹಿತಕ್ಕಾಗಿ ಹಿರಿಯರೊಂದಿಗೆ ತಾವು ಹೆಜ್ಜೆ ಹಾಕುತ್ತಿದ್ದರು. ಸಂಘದ ಹಿತಕ್ಕಾಗಿ ಮಾತ್ರ ನಾವುಗಳು ಎಂಬುದನ್ನು ಪದೇ ಪದೇ ಒತ್ತಿ ಹೇಳುತ್ತಿದ್ದರು. ಕೆಲವೊಮ್ಮೆ ವೈಯಕ್ತಿಕ ಸ್ವಾರ್ಥ, ದುರುಪಯೋಗಗಳು ಗಮನಕ್ಕೆ ಬಂದಲ್ಲಿ ತುಂಬಾ ನೊಂದುಕೊಂಡಿದ್ದೂ ಉಂಟು. ಕಾಲ ಕ್ರಮೇಣ ಸರಿ ಹೋಗುತ್ತದೆ ಎಂಬ ಭಾವನೆ ಅವರದಾಗಿರುತ್ತಿತ್ತು.

ಕಾರ್ಯಾಲಯದ ಲೆಕ್ಕಪತ್ರಗಳ ಬಗ್ಗೆ ನಿಖರತೆ, ಸಂಘದ ವಸ್ತುಗಳು ಹಾಗೂ ಹಣಕಾಸಿನ ವ್ಯವಹಾರದಲ್ಲಿ ದುರುಪಯೋಗವಾಗದಂತೆ ಒಂದೊಂದು ರೂಪಾಯಿಯ ಲೆಕ್ಕ, ಕಾರ್ಯಾಲಯ ಸ್ವಚ್ಛತೆಯ ಬಗ್ಗೆ ಕಳಕಳಿ ಎಂದಿಗೂ ನಾವು ಮರೆಯುವಂತಿಲ್ಲ ಮತ್ತು ನಮಗೆಲ್ಲಾ ಅವರು ಅನುಕರಣೀಯವಾಗಿದ್ದರು. ಕಾರ್ಯಾಲಯದಲ್ಲಿ ಅವರು ನಿರಂತರವಾಗಿ ಕುಳಿತುಕೊಳ್ಳುತ್ತಿದ್ದ ಕುರ್ಚಿ, ಟೇಬಲ್ ಗಮನಿಸಿದರೆ ಅವರು ಇನ್ನೂ ಇಲ್ಲೇ ಇದ್ದಾರೆ ಎನ್ನುವಂತೆ ಭಾಸವಾಗುತ್ತಿದೆ. ಅವರ ನೆನಪು ಮಾತ್ರ ಪ್ರತಿಯೊಬ್ಬ ಕಾರ್ಯಕರ್ತರಿಗೂ ಇನ್ನು ಕಣ್ಣಿಗೆ ಕಟ್ಟಿದಂತಿದೆ, ಏಕೆಂದರೆ ಅವರು ಇಲ್ಲದೇ ಇರುವ ಕಾರ್ಯಾಲಯವನ್ನು ನಾವು ಊಹೆ ಮಾಡುವುದು ಕಷ್ಟವೆನಿಸುತ್ತದೆ. ಶಿಕ್ಷಕ ಸಂಘದ ಮನೆಯ ಒಬ್ಬ ಹಿರಿಯರನ್ನು ಕಳೆದುಕೊಂಡಂತಾಗಿದೆ.

ಅವರಲ್ಲಿನ ಬಹುತೇಕ ಸಂಸ್ಕಾರದ ಗುಣಗಳನ್ನು ನೋಡಿದಾಗ ನನ್ನ ತಂದೆಯ ನೆನಪು ಆಗುತ್ತದೆ. ಆದ್ದರಿಂದ ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ತುಂಬಾ ಪ್ರೀತಿ ಮತ್ತು ಅಭಿಮಾನ. ಇತ್ತೀಚಿನ ಕೆಲವು ವರ್ಷಗಳಿಂದ ವಯೋ ಸಹಜ ಕಾಯಿಲೆಗಳ ಕಾರಣಕ್ಕಾಗಿ ವಾರದಲ್ಲಿ ಕನಿಷ್ಠ ಎರಡು ಬಾರಿಯಾದರೂ ಅವರಿಗೆ ಫೋನ್ ಮುಖಾಂತರ ಮಾತನಾಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸುವುದು, ಅನೌಪಚಾರಿಕವಾಗಿ ಬೆಂಗಳೂರಿಗೆ ಬಂದಾಗ ಅವರನ್ನು ಭೇಟಿ ಮಾಡುತ್ತಿದ್ದುದು ನಿರಂತರವಾಗಿರುತ್ತಿತ್ತು. ನಿಮ್ಮ ಅನುಚರಣೆಗೆ ಅಗತ್ಯವಿದ್ದಲ್ಲಿ ದಯವಿಟ್ಟು ತಿಳಿಸಿ ನಾನು ಬರುತ್ತೇನೆ ಎಂದು ಹೇಳುತ್ತಿದ್ದೆ. ಆದರೂ ಒಂದು ದಿನ ಕೂಡ ಅವರು ಅಪೇಕ್ಷಿಸಲಿಲ್ಲ. ಆದರೂ ಕೆಲವು ಬಾರಿ ಮಾತ್ರ ನನಗೆ ಅವರ ಅನುಚರಣೆಯ ಅವಕಾಶ ಸಿಕ್ಕಿತ್ತು ಎಂಬುದು ಇನ್ನು ನೆನಪು ಮಾತ್ರ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲೆಂದು ಪ್ರಾರ್ಥಿಸುತ್ತೇನೆ.

●

**ನಿಮ್ಮ ಮನಸ್ಸು ಸರಳತೆ, ಪವಿತ್ರತೆಗಳಲ್ಲಿ ಅಲೆದಾಡಲಿ.**

# ಹೀಗಿದ್ದರು ನಮ್ಮ ಜಿಎಸ್‌ಕೆ

■ ಶ್ರೀ ಆರ್. ಕೊಟ್ರಪ್ಪ
ರಾಜ್ಯ ಉಪಾಧ್ಯಕ್ಷರು, ಕ.ರಾ.ಮಾ.ಶಿ.ಸಂಘ

ನಾನು ಕಂಡಂತೆ, ನೋಡಿದಂತೆ, ಅನುಭವದ ದೊಡ್ಡ ಪರ್ವತವೇ ಆಗಿದ್ದರು ಜಿಎಸ್‌ಕೆ ಸರ್. ಅದರ ಆಳ, ಅಗಲ ಸಾಕಷ್ಟು ಇತ್ತು. ಯಾವುದೇ ವಿಷಯ ಸಂಗತಿಗಳ ಬಗ್ಗೆ ಅಪ್‌ಡೇಟ್ ಆಗಿದ್ದರು. ನಾನು ಶ್ರೀಯುತರನ್ನು 1994ನೇ ಇಸ್ವಿಯಿಂದ ಬಲ್ಲೆ. ಮೊಟ್ಟಮೊದಲು ಅವರು ಪರಿಚಯವಾಗಿದ್ದು ಚನ್ನೇನ ಹಳ್ಳಿಯ ಕಾರ್ಯಾಗಾರದಲ್ಲಿ ನನ್ನ ಶಾಲೆಯ ಹಿರಿಯ ಶಿಕ್ಷಕರಾಗಿದ್ದ ಹಾಗೂ ಮಾಧ್ಯಮಿಕ ಶಿಕ್ಷಕ ಸಂಘದ ಅಂದಿನ ಜಿಲ್ಲಾಕಾರ್ಯದರ್ಶಿಯಾಗಿದ್ದ ಶ್ರೀ ಶ್ರೀಧರಮೂರ್ತಿಯವರಿಂದ. ಆಗ ಶ್ರೀ ಜಿಎಸ್‌ಕೆಯವರು ಬಿಳಿಲುಂಗಿ ತೊಟ್ಟು ಪಾದರಸದಂತೆ ಓಡಾಡುತ್ತಿದ್ದುದು ಶ್ರೀ ಹೆಚ್ಚೆನ್ನಾರ್ ಜೊತೆಯಲ್ಲಿ. ಅವರ ಆಗಿನ ವಯಸ್ಸು ತರುಣರನ್ನು ನಾಚಿಸುವಂತಿತ್ತು.

ನನ್ನ ತಾಲೂಕಾದ ಹಗರಿಬೊಮ್ಮನಹಳ್ಳಿಯಲ್ಲಿ ಪ್ರತಿಭಾ ಪುರಸ್ಕಾರ ವಿಷಯದ ಕಾರ್ಯಾಗಾರಗಳು (ಜಿಲ್ಲಾಮಟ್ಟದಲ್ಲಿ ) ಮಾಡುವಾಗ ಅವರ ಸಲಹೆ, ಸೂಚನೆಗಳನ್ನು ಪಡೆದು ತಪ್ಪದೇ ಪಾಲಿಸಿಕೊಂಡು ಬರುತ್ತಿದ್ದೆವು ಹಾಗೂ ಮುಂದಿನ ತಿಂಗಳು ಈ ರೀತಿ ಕಾರ್ಯಕ್ರಮ ಯೋಚನೆ ಮಾಡಿದ್ದೇವೆ ಅಂದರೆ ಅವರು ಗೋ ಅಹೆಡ್ ಎಂದು ಒಪ್ಪಿಗೆ ಸೂಚಿಸುತ್ತಿದ್ದರು. ನಮ್ಮ ಹೊಸ ಮನೆಯ ಗೃಹಪ್ರವೇಶಕ್ಕೆ ಶ್ರೀಯುತರು ಬಂದಾಗ ಅನೇಕ ಉತ್ತಮ ಸಲಹೆಗಳನ್ನು ಕೊಟ್ಟಿದ್ದರು. ಒಂದು ಸಾರಿ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಮಾಡುವ ಸಂದರ್ಭದಲ್ಲಿ ಮಧ್ಯಾಹ್ನದ ಊಟದ ಸಮಯದಲ್ಲಿ ಇದ್ದಕ್ಕಿದ್ದ ಹಾಗೆ ಅವರು ಕುಸಿದು ಕುಳಿತರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವೈದ್ಯರು ತಕ್ಷಣವೇ ಅವರಿಗೆ ವೈದ್ಯೋಪಚಾರ ಮಾಡಿದ ನಂತರ ಅವರು ಸುಧಾರಿಸಿಕೊಂಡಿದ್ದು ನಮಗೆಲ್ಲಾ ಸಂತೋಷ ತಂದಿತ್ತು.

ಶ್ರೀ ಜಿಎಸ್‌ಕೆಯವರ ಸರಳತೆ ಮತ್ತು ಕಾರ್ಯಕರ್ತರನ್ನು ಬೆಳೆಸುವ ರೀತಿ ಅನನ್ಯ ಹಾಗೂ ವಿಶಿಷ್ಟತೆಯಿಂದ ಕೂಡಿರುತ್ತಿತ್ತು ಎಂದರೆ ಅತಿಶಯೋಕ್ತಿ ಅಲ್ಲ. ಸದಾ ಉತ್ಸಾಹದ ಮಾತುಗಳು, ಸಲಹೆಗಳು ಅನುಕರಣೀಯವಾಗಿದ್ದವು. ಅವರ ದೂರದ ದೃಷ್ಟಿಕೋನ ವಿಭಿನ್ನವಾಗಿದ್ದು, ಅದು ಈಗ ನಮ್ಮ ಕಣ್ಮುಂದೆ ಇದೆ. ಸಂಘದ ಕಾರ್ಯ ಎಂದರೆ ಸುಲಭ ಅಲ್ಲ. ಅದು ಸಂಘದ ಪ್ರಾರ್ಥನೆಯಲ್ಲಿ ಹೇಳುವಂತೆ 'ಕಂಠಕಾರ್ಕಿರ್ಣಮಾರ್ಗಂ'. ಹೊಸ ಹೊಸ ಕಾರ್ಯಕರ್ತರನ್ನು ಸಂಘಟನೆಗೆ ಜೋಡಿಸಿಕೊಂಡು ಕಾರ್ಯಪಡೆಯನ್ನು ಕಟ್ಟಬೇಕಾಗಿದೆ. ದೇವರು ಶ್ರೀಯುತರನ್ನು ಬಹು ಬೇಗ ಕರೆಸಿಕೊಂಡದ್ದು ನಮಗೆಲ್ಲಾ ನಷ್ಟವಾದರೂ ಅದನ್ನು ತುಂಬುವುದು ಕಷ್ಟವೇ ಆದರೂ, ಕಾರ್ಯಪದ್ಧತಿಯನ್ನು ಬೆಳೆಸಿ ನಮ್ಮದೇ ಲಕ್ಷ್ಯ, ಗುರಿಯನ್ನು ತಲುಪಬೇಕು. ಒಟ್ಟಾರೆಯಾಗಿ ಶ್ರೀಯುತ ಜಿಎಸ್‌ಕೆಯವರು ನಮ್ಮನ್ನು ಅಗಲಿದ್ದರೂ ಸಹಾ ಅವರು ಕಾರ್ಯಶೈಲಿಯಲ್ಲಿ ನಮ್ಮ ಜೊತೆ ಇರುತ್ತಾರೆಂದು ಭಾವಿಸಿ ನನ್ನ ನಮನವನ್ನು ಅವರಿಗೆ ಅರ್ಪಿಸುತ್ತೇನೆ.

# ಜಿ. ಎಸ್. ಕೆ. ನೆನಪು

■ ಶ್ವೇತಾದ್ರಿ
ನಿವೃತ್ತ ಮುಖ್ಯ ಶಿಕ್ಷಕರು

ಶಿಕ್ಷಕರನ್ನು ವಿದ್ಯಾರ್ಥಿಗಳು, ಸಹೋದ್ಯೋಗಿಗಳು ಹಾಗೂ ಆಪ್ತರು ಅವರ ಸಂಕ್ಷಿಪ್ತ ಹೆಸರಿನಿಂದ ಕರೆಯುವುದು ರೂಢಿ. ಅಂತೆಯೇ ಶ್ರೀ ಜಿ.ಎಸ್.ಕೃಷ್ಣಮೂರ್ತಿಯವರನ್ನು ಶಿಕ್ಷಕ ಬಂಧುಗಳೆಲ್ಲರೂ ಜಿ. ಎಸ್. ಕೆ. ಎಂದೇ ಗುರುತಿಸುತ್ತಿದ್ದರು. 1992ನೇ ಇಸವಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಳ್ಳಿ ಹಬ್ಬದ ಸಮಾರಂಭ ಬೆಂಗಳೂರಿನಲ್ಲಿ ಅದ್ದೂರಿಯಾಗಿ ನಡೆಯಿತು. ಆಗ ನಾನು ಶಿಕ್ಷಕ ಸಂಘಕ್ಕೆ ಕಾಲಿಟ್ಟಿದ್ದು. ಕ್ರಮೇಣ ಶಿಕ್ಷಕ ಸಂಘದ ಕಾರ್ಯಕ್ರಮಗಳಲ್ಲಿ, ಬೈಠಕ್‌ಗಳಲ್ಲಿ ಶಿಕ್ಷಕ ಸಂಘದ ಅನೇಕ ಹಿರಿಯರ ಪರಿಚಯವಾಯಿತು. ಅವರಲ್ಲಿ ಜಿ.ಎಸ್.ಕೆ ಕೂಡ ಒಬ್ಬರು.

ಜಿ.ಎಸ್.ಕೆ.ಯವರದು ನೋಡಿದ ಕೂಡಲೇ ಆಕರ್ಷಿಸುವ ಸ್ವರೂಪ ಎನಿಸದು. ಮಾತೂ ಕಡಿಮೆಯೇ. ಸಂಘಟನೆಯಲ್ಲಿ ಉನ್ನತ ಹುದ್ದೆಗಳನ್ನು ಅವರು ವಹಿಸಿಕೊಂಡ ನೆನಪಿಲ್ಲ. ಆದರೆ ಪ್ರಚಾರವಿಲ್ಲದೆ, ಯಾರ ಗಮನಕ್ಕೂ ಹೆಚ್ಚಾಗಿ ಬರದೆ ಪ್ರಮುಖವಾದ ಜವಾಬ್ದಾರಿಗಳನ್ನೇ ನಿರ್ವಹಿಸುತ್ತಿದ್ದವರು. ಸುಮಾರು 40 ವರ್ಷಗಳಿಗೂ ಮೀರಿ ಶಿಕ್ಷಕ ಸಂಘಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಬ್ರಹ್ಮಚಾರಿಯಾಗಿದ್ದರಿಂದ ಶಿಕ್ಷಕ ಸಂಘವನ್ನೇ ತಮ್ಮ ಮನೆಯಾಗಿಸಿಕೊಂಡು ಹಗಲಿರುಳೂ ಅದರ ಹಿತ ಹಾಗು ಏಳಿಗೆಯನ್ನು ಕಾಪಾಡಿಕೊಂಡು ಬಂದವರು.

ಜಿ.ಎಸ್.ಕೆ.ಯವರದು ಸೌಮ್ಯ ಸ್ವಭಾವ. ಆದರೆ ಸಮಯ ಬಂದಾಗ ನೇರವಾಗಿ, ಖಡಕ್ಕಾಗಿ ಹೇಳಬೇಕಾದುದನ್ನು ಹೇಳುತ್ತಿದ್ದರು. ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರಾಗಿ ಬಹಳ ಜತನದಿಂದ ನಿಸ್ಪೃಹತೆಯಿಂದ ಕಾರ್ಯ ನಿರ್ವಹಿಸಿದವರು. ಆ ಸ್ಥಾನವನ್ನು ತುಂಬುವುದು ಕಷ್ಟವೇ ಸರಿ. 'ಶಿಕ್ಷಕ ಸಮಾಚಾರ' ಪತ್ರಿಕೆಯ ಪ್ರಕಟಣೆಯಲ್ಲಿ ಜಿ.ಎಸ್.ಕೆ.ಯವರು ವಹಿಸುತ್ತಿದ್ದ ಪಾತ್ರ ಅಮೂಲ್ಯವಾದುದು. ನಾನು ಶಿಕ್ಷಕ ಸಂಘದಲ್ಲಿ ನಿರ್ವಹಿಸಿದ ಕೆಲವು ಜವಾಬ್ದಾರಿಗಳಲ್ಲಿ ಅನೇಕ ಸಂದರ್ಭಗಳಲ್ಲಿ ಜಿ.ಎಸ್.ಕೆ.ಯವರು ಉಪಯುಕ್ತ ಸಲಹೆಗಳನ್ನು ನೀಡುತ್ತಿದ್ದರು.

ನಾನು ಕೆಲಸ ಮಾಡುತ್ತಿದ್ದ ಶಾಲೆಯ ವಿಚಾರದಲ್ಲೂ ಜಿ.ಎಸ್.ಕೆಯವರಿಗೆ ಬಹಳ ವಿಶ್ವಾಸ. ನಾವು ಕರೆದಾಗಲೆಲ್ಲ ದೂರವನ್ನೂ ಲೆಕ್ಕಿಸದೆ ಬರುತ್ತಿದ್ದರು. ಒಟ್ಟಾರೆ ಜಿ.ಎಸ್.ಕೆ.ಯವರ ವ್ಯಕ್ತಿತ್ವವೇ ಒಂದು ರೀತಿ ವಿಶಿಷ್ಟ. ಅವರು ಅಸ್ತಂಗತರಾಗುವುದಕ್ಕೆ ಕೆಲವು ದಿನಗಳ ಮುಂಚೆ ಫೋನ್ ಮಾಡಿ ನನ್ನ ಮತ್ತು ಮನೆಯವರ ಯೋಗಕ್ಷೇಮ ವಿಚಾರಿಸಿದ್ದರು.

'ಜಾತಸ್ಯ ಮರಣಂ ಧ್ರುವಂ'. ಈಗ ಜಿ.ಎಸ್.ಕೆ. ನೆನಪಾಗಿ ಉಳಿದಿದ್ದಾರೆ. ಅವರ ಒಡನಾಟ, ನೆನಪು ಸದಾ ಹಸಿರಾಗಿರುತ್ತದೆ. ಅವರಿಗೆ ಭಗವಂತ ಸದ್ಗತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸೋಣ. ●

**ಶಾಶ್ವತವಾದ ತುಷ್ಟೀಕರಣದ ನೀತಿಗಿಂತ ಮೂರ್ಖತೆ ಇನ್ನೊಂದಿಲ್ಲ, ಮಿತಿಯಿಲ್ಲದ ಬೇಡಿಕೆಗಳು ಹಾಗೂ ಎಂದೂ ತೃಪ್ತಿಪಡಿಸಲಾಗದ ತುಷ್ಟೀಕರಣ – ಇದೇ ಈ ನೀತಿಯ ಅಂತಿಮ ಗುರಿ.**

**ಹಿಂಸಾಚಾರಕ್ಕೆ ಶರಣಾಗಿ ಗಳಿಸಿದ ಶಾಂತಿ ನಿಜಕ್ಕೂ ಶಾಂತಿ ಎನಿಸದು. ಅದು ಆತ್ಮಘಾತುಕತನ ಮಾತ್ರವಲ್ಲ, ಗೌರವ ಸಂಪನ್ನ ಮಾನವೀಯ ಬದುಕಿಗೆ ಅಗತ್ಯವೆನಿಸುವ ಎಲ್ಲ ಉದಾತ್ತ ಸಂಗತಿಗಳನ್ನು ಬರ್ಬರತೆಯ ಹಾಗೂ ಮೃಗೀಯ ಶಕ್ತಿಗಳ ಮುಂದೆ ಬಲಿಕೊಡುವಂತಹ ಕೃತ್ಯ ಅದು.** – ಡಾ. ಬಿ. ಆರ್. ಅಂಬೇಡ್ಕರ್

➢ ಪುಟ 4 ರಿಂದ.....

2001 ರಲ್ಲಿ ಮಗಳು ಸೌ. ಸ್ಮಿತನ ಮದುವೆಯಾದಾಗ ನನಗೆ ತಿಳಿಯದಂತೆ ಸೀತಾಲಕ್ಷ್ಮಿಯವರ ಕೈಗೆ 50 ಸಾವಿರ ರೂಪಾಯಿಗಳನ್ನು ತಂದುಕೊಟ್ಟು ಇದನ್ನು ಇಟ್ಟುಕೊಂಡಿರಿ ಎಂದು ಕೊಟ್ಟಿದ್ದರಂತೆ. ಈ ವಿಷಯ ನನಗೆ ತಿಳಿದದ್ದು ಈಗ ನಾಲ್ಕು ದಿನಗಳ ಹಿಂದೆ. ಇಷ್ಟು ಪ್ರೀತಿ ವಾತ್ಸಲ್ಯ ನಮ್ಮ ಕುಟುಂಬದ ಬಗ್ಗೆ ! ನಾವು 2009 ರಲ್ಲಿ ಅಮೆರಿಕಾಗೆ ಹೋದಾಗ ನಮ್ಮ ಶ್ವೇತಾ ಇಂಜಿನಿಯರಿಂಗ್ ಓದುತ್ತಿದ್ದಳು. ಅವರ ಅಜ್ಜಿ ತಾತ ಮನೆಯಲ್ಲಿದ್ದರು. ಆಗಂತೂ ಎರಡು ದಿನಕ್ಕೊಮ್ಮೆ ಮನೆಗೆ ಬಂದು ಅವರ ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದರು. ಇಬ್ಬರು ಮಕ್ಕಳು ಅಮೇರಿಕೆಯಿಂದ ಬಂದಾಗ ಮತ್ತು ವಾಪಸ್ ಹೋಗುವಾಗ ತಪ್ಪದೆ airport ಗೆ ಬಂದೇ ಬರುತ್ತಿದ್ದರು. ಅವರ ನಿಧನದ ಸುದ್ದಿ ತಿಳಿಸಿದಾಗ ಇದನ್ನು ನೆನೆದು ಇಬ್ಬರೂ ಕಣ್ಣೀರು ಹಾಕಿದರು.

2015 ರ ಜುಲೈನಲ್ಲಿ ನನ್ನೊಂದಿಗೆ ಅವರೂ ಅಮೆರಿಕೆಗೆ ಬಂದಿದ್ದರು. ದೊಡ್ಡ ಮಗಳು ಆಗ ಒರೆಗಾನ್ ರಾಜ್ಯದ ಪೋರ್ಟ್‌ಲ್ಯಾಂಡ್ ಎಂಬ ಊರಿನಲ್ಲಿ ಇದ್ದಳು. ಅವರ ಮನೆಯಲ್ಲಿ ಒಂದೂವರೆ ತಿಂಗಳಿದ್ದ ಕಾಲ ಅವರು 6 ವರುಷದ ಮೊಮ್ಮಗಳು ರಿಷಿಕಾಳ ಜೊತೆ ಮಗುವಿನಂತೇ ಆಟ ಆಡುತ್ತಿದ್ದರು. ನಂತರ ಸಿಲಿಕಾನ್ ವ್ಯಾಲಿ ಎಂದು ಕರೆಸಿಕೊಳ್ಳುವ ಬೇ ಏರಿಯಾದ ಸನ್ನಿವೇಲ್‌ನಲ್ಲಿದ್ದ ಶ್ವೇತಾಳ ಮನೆಯಲ್ಲಿ ಒಂದೂವರೆ ತಿಂಗಳಿದ್ದಾಗ ಅವರು ಪಟ್ಟ ಸಂಭ್ರಮಕ್ಕೆ ಎಣೆಯಿಲ್ಲ.

ವೃದ್ದಾಪ್ಯದಲ್ಲಿ ಕೆಮ್ಮು ಅವರನ್ನು ಬಿಡುತ್ತಲೇ ಇರಲಿಲ್ಲ. ಅದಕ್ಕಾಗಿ ಅಲೋಪಥಿ ಔಷಧಿ ತೆಗೆದುಕೊಳ್ಳುತ್ತಿದ್ದರು. ಬಾಕಿ ಪದ್ಧತಿಗಳ ಬಗ್ಗೆ ಅವರಿಗೆ ನಂಬಿಕೆ ಇರಲಿಲ್ಲ. ಆದರೆ ನಮ್ಮ ಒತ್ತಾಯಕ್ಕೆ ನಮ್ಮೊಂದಿಗೆ ಬಂದು ಪ್ರಾರಂಭದಲ್ಲಿ ಹೋಮಿಯೋಪತಿ ಔಷಧಿ ತೆಗೆದುಕೊಂಡರು. ಅದರಲ್ಲಿ ಸ್ವಲ್ಪ ಗುಣಕಂಡಿತು. ಆದರೆ ಅವರಿಗೆ ನಂಬಿಕೆ ಇರಲಿಲ್ಲ. ಮತ್ತೆ ನನ್ನ ಒತ್ತಾಯಕ್ಕೆ ಆಯುರ್ವೇದ ಡಾಕ್ಟರ್ ಬಳಿ ಔಷಧಿ ಪಡೆದರು. ಅವರ ಕೆಮ್ಮು ಸಾಕಷ್ಟು ಕಡಿಮೆ ಆಯಿತು. ಅದರಲ್ಲಿ ನಂಬಿಕೆ ಬಂತು. ಅದನ್ನು ಮುಂದುವರೆಸಿಕೊಂಡು ಹೋದರು.

ಕೊನೆಯದಾಗಿ, ನಮ್ಮ ಮಾಸಪತ್ರಿಕೆ ಶಿಕ್ಷಕ ಸಮಾಚಾರ ಬೆಂಗಳೂರಿಂದ ಪ್ರಕಟಗೊಳ್ಳಲು ಪ್ರಾರಂಭಿಸಿದ್ದು 1985 ರ ಸೆಪ್ಟೆಂಬರ್‌ನಿಂದ. ಅವರು ನಮ್ಮ ಟೀಮ್ ಸೇರಿಕೊಂಡದ್ದು 90ರ ದಶಕದ ಪ್ರಾರಂಭದಲ್ಲಿ. ಅಲ್ಲಿಂದ ಅವರ ಅಂತ್ಯದವರೆಗೆ ಪತ್ರಿಕೆಯ ಪ್ರಕಟಣೆಯ ಬಗ್ಗೆ ಅವರಿಗೆ ವಿಪರೀತ ಕಾಳಜಿ. 2000ದ ನಂತರ ಪತ್ರಿಕೆಯ ಡಿಟಿಪಿ ಆಗುತ್ತಿದ್ದುದು ವಿಜಯನಗರದ ಬಳಿಯ ಮೂಡಲಪಾಳ್ಯದ ಶ್ರೀಮತಿ ಜ್ಯೋತಿಯವರ ಮನೆಯಲ್ಲಿ. ಬನಶಂಕರಿ 2ನೇ ಹಂತದಿಂದ ನಾನು, ಯಾದವಸ್ಮೃತಿಯಿಂದ ಅವರೂ ಅಲ್ಲಿ ಸೇರುತ್ತಿದ್ದೆವು. ಬೇಡವೆಂದರೂ ಬರುತ್ತಿದ್ದರು. ಅರ್ಧದಿನ ಅಲ್ಲಿ ಕಳೆಯುತ್ತಿತ್ತು. ನಂತರ ವಿಜಯನಗರದ ಹೋಟೆಲ್ ಊಟ ಮತ್ತು ಮನೆ ಸೇರುವ ವೇಳೆಗೆ ಸಂಜೆ ಆಗುತ್ತಿತ್ತು. ಈಗಂತೂ ನಮಗೆ ಪೋಸ್ಟಲ್ ರಿಯಾಯಿತಿ ತೆಗೆದ ನಂತರ, ಅವರಿಗೆ ಅದೇ ಚಿಂತೆ. 4 ರೂಪಾಯಿ ಸ್ಟ್ಯಾಂಪ್ ಹಾಕಲು ಬೇಸರ. ಅದಕ್ಕಾಗಿ ರಿಯಾಯಿತಿ ಪಡೆಯಲು ಓಡಾಟ. ದೂರವಾಣಿಯಲ್ಲಿ ನನ್ನೊಂದಿಗೆ ಅವರ ಚಿಂತೆ ಹಂಚಿಕೊಳ್ಳುತ್ತಿದ್ದರು.

ಅವರ ಮನಸ್ಸಿನ ಇಚ್ಛೆಯೊಂದನ್ನು ಹಂಚಿಕೊಂಡು ನನ್ನ ಲೇಖನ ಮುಕ್ತಾಯಗೊಳಿಸುವೆ. ಶ್ರೀ ನರಹರಿಯವರ ಬಗ್ಗೆ ಅವರಿಗೆ ವಿಪರೀತ ಶ್ರದ್ಧೆ. ನಾನು ಏಪ್ರಿಲ್‌ನಲ್ಲಿ ಅಮೇರಿಕೆಗೆ ಬರುವ ಮುನ್ನ ನನ್ನೊಂದಿಗೆ "ಎಚ್‌ಎನ್‌ಆರ್ ಶ್ರೀ ನರಹರಿಯವರಿಗೆ ವಯಸ್ಸು 90 ಆಗುತ್ತಾ ಬಂತು. ನೀವು ಬಂದ ತಕ್ಷಣ ನಾವು ಅವರ ಹೆಸರಲ್ಲಿ ಒಂದು ಹೋಮ ಮಾಡಿಸಿ ನಮ್ಮೆಲ್ಲಾ ಹಿಂದಿನ ಕಾರ್ಯಕರ್ತರನ್ನು ಸೇರಿಸಿ ಒಂದು ಸಮಾರಂಭ ಮಾಡೋಣ" ಎಂದಿದ್ದರು. ಈಗ ಅವರೇ ಇಲ್ಲ. ಜಿಎಸ್‌ಕೆ, ಖಂಡಿತ ನಾನು ನಿಮ್ಮ ಮನದಿಚ್ಛೆಯನ್ನು ಪೂರ್ಣಗೊಳಿಸುತ್ತೇನೆ ಎಂದು ಆಶ್ವಾಸನೆ ಕೊಡುತ್ತಾ ನನ್ನ ಈ ಲೇಖನದ ಮೂಲಕ ಶ್ರದ್ಧಾಂಜಲಿ ಅರ್ಪಿಸುತ್ತೇನೆ.

# ನಾ ಕಂಡ ಕೃಷ್ಣಮೂರ್ತಿ (ಚಿಕ್ಕಪ್ಪ)

ಸರಳ ಸಜ್ಜನಿಕೆಯ ಪ್ರತೀಕ ನಮ್ಮ ಚಿಕ್ಕಪ್ಪನವರಾದ ಜಿಎಸ್‌ಕೆ ರವರು. ತಮ್ಮ ಇಡೀ ಜೀವನವನ್ನು ಸಂಘಕ್ಕಾಗಿ ತೊಡಗಿಸಿಕೊಂಡ ಮಹಾನ್ ವ್ಯಕ್ತಿ. ಅವರು ವೃತ್ತಿಯಲ್ಲಿ ಅಧ್ಯಾಪಕರು. ಆದ್ದರಿಂದ ಶಿಕ್ಷಕರೆಂದರೆ ವಿಶೇಷ ಗೌರವ. ಅವರು ಮಿತ ಭಾಷಿ. ಆದರೆ ಮಾತನಾಡಿದ ಒಂದು ವಾಕ್ಯ ಅಥವಾ ಪದ ಬಹಳ ಅರ್ಥ ಗರ್ಭಿತವಾಗಿರುತ್ತಿತ್ತು ಹಾಗು ಆಳವಾಗಿರುತ್ತಿತ್ತು. ಕೊನೆಯ ಘಳಿಗೆಯವರೆಗೂ ತನ್ನ ಜೀವನವನ್ನು ಸಂಘಕ್ಕಾಗಿಯೇ ಮುಡಿಪಾಗಿಟ್ಟಿದ್ದ ಅಪರೂಪದ ವ್ಯಕ್ತಿ. ಈ ನಿಟ್ಟಿನಲ್ಲಿ ಅವರು ತಮ್ಮ ಹೆಚ್ಚಿನ ಕಾಲವನ್ನು ಸಂಘದ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡ, ಪ್ರೀತಿ ಅಭಿಮಾನವನ್ನು ಸಂಪಾದಿಸಿದ ಎಲ್ಲರ ಪ್ರೀತಿಗೆ ಪಾತ್ರರಾದ ಅಪರೂಪದ ವ್ಯಕ್ತಿ. ಸುಮಾರು 10 ವರ್ಷಗಳಿಂದ ನಮ್ಮವರೆಲ್ಲರಿಗೂ ಬಹಳ ಹತ್ತಿರವಾದರು. ಅವರ ಸರಳತೆಯನ್ನು ಕಂಡು, ನಾನು ಅದೆಷ್ಟೋ ಬಾರಿ ಆಶ್ಚರ್ಯ ಮತ್ತು ಹೆಮ್ಮೆ ಪಡುತ್ತಿದ್ದೆ. ಇಂತಹ ವ್ಯಕ್ತಿಯ ಇಲ್ಲದಿರುವಿಕೆಯು ಮನಸ್ಸಿಗೆ ಬಹಳ ನೋವನ್ನು ತಂದಿದೆ ಹಾಗು ಮರೆಯಲು ಅಸಾಧ್ಯವಾಗಿದೆ.

ನಾವು ಚಿಕ್ಕವರಿರುವಾಗ ನಮ್ಮ ಪೇಪರ್ ಕರೆಕ್ಷನ್ ಮಾಡುವುದಾಗಿ ರೇಗಿಸುತ್ತಿದ್ದರು. ಆಗ ನಾವು ಬೇಡವೆಂದು ಕೇಳಿಕೊಳ್ಳುತ್ತಿದ್ದೆವು. ಏಕೆಂದರೆ ಎಲ್ಲೊ ಒಂದು ಕಡೆ ಭಯ, ಏನಾದರೂ ತಪ್ಪುಗಳನ್ನು ಹೇಳಿಬಿಡುತ್ತಾರೇನೋ ಎಂಬ ಹೆದರಿಕೆ. ದೇಶ-ವಿದೇಶಗಳನ್ನು ಸುತ್ತಿ ಬಂದರೂ ತೋರಿಸಿಕೊಳ್ಳದ ವ್ಯಕ್ತಿ. May his soul rest in peace. May his blessings be with us.

**– G N KUMAR**

# ನನ್ನ ಪ್ರಿಯ ಸಹೋದರ ಕೃಷ್ಣ

ಎಲ್ಲರ ಉನ್ನತಿ ಹಾಗೂ ಅಭಿವೃದ್ಧಿಯಲ್ಲಿ ಭಾಗಿಯಾದ ಕೃಷ್ಣಮೂರ್ತಿ ಅವರಿಗೆ ಭಾವಪೂರ್ಣ, ಭಾಷ್ಪವಾರಿಯ ವಿದಾಯ.

ಅವರು ಸದಾ ಹೇಳುತ್ತಿದ್ದ ಮಾತುಗಳು: **ಇಡೀ ಜಗತ್ತು ಒಂದು ಕುಟುಂಬದಂತೆ, ಸಮಾಜದಲ್ಲಿ ಸಾಮರಸ್ಯವಿರಬೇಕು.** ತಮ್ಮ ಜೀವನವನ್ನು ಸೇವಾ ಮನೋಭಾವದಿಂದಲೇ ನಡೆಸಿದ ಕೃಷ್ಣಮೂರ್ತಿ ನಮ್ಮೆಲ್ಲರ ಮನದಲ್ಲಿ ಚಿರಂಜೀವಿಯಾಗಿರುವರು. ಅವರು ನಡೆಸುತ್ತಿದ್ದ ಸೇವಾಕಾರ್ಯಗಳು ಒಂದರೆಡಲ್ಲ. ಮಕ್ಕಳ ವಿದ್ಯಾಭ್ಯಾಸ, ಅನಾಥ ಮಕ್ಕಳ ಅಭಿವೃದ್ಧಿಗಾಗಿ ಯೋಜನೆ, ಸಾಮಾಜಿಕವಾದ ಇತರ ಹಲವು ಸೇವಾಕಾರ್ಯಗಳು.

ಅವರು ಪಾಲಿಸಿಕೊಂಡು ಬಂದಿದ್ದ ಜೀವನ ಸೂತ್ರಗಳು ಹೀಗಿವೆ. ಇತರರಿಗೂ ಅವರು ಇದನ್ನೇ ಹೇಳುತ್ತಿದ್ದರು.

• ನಿಮ್ಮಲ್ಲಿರುವ ಅತ್ಯುತ್ತಮವಾದದ್ದನ್ನು ಜಗತ್ತಿಗೆ ನೀಡಿ. • ಜನರನ್ನು ಅವರ ಸರಿ, ತಪ್ಪುಗಳು ಮೂಲಕ ವಿಮರ್ಶಿಸಬೇಡಿ. ಅದರಿಂದ ಕಲಿಯಿರಿ. • ಯಾರನ್ನೂ ಕಡಿಮೆ ಅಂದಾಜು ಮಾಡಬೇಡಿ. • ಎಲ್ಲರನ್ನೂ ಬದುಕಲು ಬಿಡಿ. • ನೀವು ನೀವಾಗಿರಿ. • ಉತ್ತಮ ಪ್ರಭಾವಶಾಲಿಯಾಗಿರಿ, ಇತರರಿಗೆ ಪ್ರೇರಕರಾಗಿರಿ. • ಶ್ರೀಮಂತಿಕೆ ಉಳಿಸಿಕೊಳ್ಳಲಾಗದು, ಶ್ರೀಮಂತ ವರ್ತನೆ ಸಮರ್ಥನೀಯ. • ಸಂತೋಷವು ನೀವು ಹೇಗೆ ಸ್ವೀಕರಿಸುತ್ತೀರಿ ಅಥವ ಮಾಡಿಕೊಳ್ಳುತ್ತೀರಿ ಮತ್ತು ಸಂದರ್ಭದಲ್ಲಿ ಶರಣಾಗುತ್ತೀರಿ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. • ಸಮುದ್ರದ ಅಲೆಗಳಂತೆ ಜನರು ಏರುವುದು, ಇಳಿಯುವುದು ಸಾಮಾನ್ಯ.

**ಜ್ಞಾನದ ಮೂರ್ತಿಯಾದೆ, ಒಳಿತಿಗೆ ಸ್ಫೂರ್ತಿಯಾದೆ**
**ತ್ಯಾಗದ ಸ್ಫೂರ್ತಿಯಾದೆ, ಎಂದೆಂದಿಗೂ ನೀ ಕೃಷ್ಣನ ಮೂರ್ತಿಯಾದೆ.**
**ಸೇವೆಯ ವೃತ್ತಿಯೊಂದಿಗೆ ನಮ್ಮ ಸಮಾಜದ ಕೀರ್ತಿಯಾದೆ.**

**ವಿಜಯ ಜಿ. ಎಸ್.**

**ಜಿ.ಎಸ್ ಕೃಷ್ಣಮೂರ್ತಿಯವರ ಸಹೋದರಿ**

# ಸಾರ್ಥಕ ಜೀವಿ

ಸನ್ಮಾನ್ಯ ಜಿ.ಎಸ್.ಕೃಷ್ಣಮೂರ್ತಿರವರು ನೆನಪಿಗೆ ಬಂದಾಗಲೆಲ್ಲ ಭರ್ತೃಹರಿಯ ನೀತಿಶತಕದ ವಾಕ್ಯ ನೆನಪಿಗೆ ಬರುತ್ತದೆ. "ಏತೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯ ಯೇ-ಯಾರು ಸ್ವಾರ್ಥವನ್ನು ಬಿಟ್ಟು ಮತ್ತೊಬ್ಬರ ಹಿತವನ್ನು ಸಾಧಿಸುವರೋ ಅವರು ಸಜ್ಜನರು". ಪ್ರತಿಫಲದ ಅಪೇಕ್ಷೆಯಿಲ್ಲದೆ ಬಹಳ ವರ್ಷಗಳ ಕಾಲ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕಾಗಿ ಮಿಡಿದ, ದುಡಿದ ಹಿರಿಯ ಜೀವ. ರಾಷ್ಟ್ರಸೇವೆಗಾಗಿ ಅವರ ಜೀವನ ಸಮರ್ಪಿತ. ಒಂದು ಉದ್ದೇಶಕ್ಕಾಗಿ, ವಿಚಾರಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟ ದೃಢಸಂಕಲ್ಪದ ಧೀಮಂತ ವ್ಯಕ್ತಿ.

ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯದ ಪ್ರಮುಖರಾಗಿ, ಮಾರ್ಗದರ್ಶಕರಾಗಿ ಅವರ ಸೇವೆ ಅವರ್ಣನೀಯ. ಸಂಘದ ಕಾರ್ಯಾಲಯ ಅಂದರೆ ಜಿ.ಎಸ್.ಕೆ., ಜಿ.ಎಸ್.ಕೆ. ಅಂದರೆ ಸಂಘದ ಕಾರ್ಯಾಲಯ ಎಂಬುವಷ್ಟು ಅವಿನಾಭಾವ ಸಂಬಂಧ. ಕಾರ್ಯಾಲಯಕ್ಕೆ ಬಂದ ಪ್ರತಿಯೊಬ್ಬ ಕಾರ್ಯಕರ್ತನನ್ನು ಆತ್ಮೀಯತೆಯಿಂದ ಮಾತನಾಡಿಸಿ, ಚಟುವಟಿಕೆಗಳ ಬಗ್ಗೆ ವಿಚಾರಿಸಿ, ಸೂಕ್ತ ಸಲಹೆಗಳನ್ನು ನೀಡಿ, ಹುರಿದುಂಬಿಸುವ ವ್ಯಕ್ತಿತ್ವ ಅವರದು. ಸದಾ ಅಧ್ಯಯನ ನಿರತರೂ, ಚಿಂತನಶೀಲರೂ ಮತ್ತು ಕಳಕಳಿಯನ್ನು ಹೊಂದಿದವರು, ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ತಾನು ಅನಾರೋಗ್ಯದಿಂದ ಕೂಡಿದ್ದರೂ, ಕಾರ್ಯಕರ್ತರಿಗೆ ಫೋನ್ ಮಾಡಿ ಹೇಗಿದ್ದೀರಿ? ಆರೋಗ್ಯವಾಗಿದ್ದೀರಾ? ಎಂದು ವಿಚಾರಿಸಿಕೊಂಡವರು.

ನನಗಂತೂ ಆಗ ಒಂದು ರೀತಿಯಲ್ಲಿ ಅಪರಾಧಿಪ್ರಜ್ಞೆ ಕಾಡಿದ್ದು ನಿಜ. ಹೌದಲ್ಲವೇ! ಕಿರಿಯರಾದ ನಾವು ಹಿರಿಯರ ಯೋಗಕ್ಷೇಮವನ್ನು ವಿಚಾರಿಸಬೇಕಿತ್ತಲ್ಲವೇ? ಎಂದು ನನಗೇ ನಾನೇ ಪ್ರಶ್ನೆ ಹಾಕಿಕೊಂಡೆ. ಅವರಿಲ್ಲದ ಕಾರ್ಯಾಲಯಕ್ಕೆ ಹೋದಾಗ ಕಣ್ಣೀರು ಬಂದು, ಏನೋ ಸಂಕಟ ಉಂಟಾಗಿ ನೀರವ ಮೌನ ಆವರಿಸಿದಂತಾಯಿತು. ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ, ಎಷ್ಟು ಬರೆದರೂ ಕಡಿಮೆಯೇ. ಅವರಿಗೆ ಹೃದಯ ತುಂಬಿದ ನಮನಗಳು.

**– ವಿ ಡಿ ಭಟ್,**
**ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ, ಕೆ ಆರ್‌ಎಂಎಸ್‌ಎಸ್**

# ಮರೆಯಲಾರದ ಮಾಣಿಕ್ಯ ಜಿ. ಎಸ್. ಕೆ. ಜೀ

ಚದುರಿ ಹೋದ ಸಂಘಟನಾ ಶಕ್ತಿ
ಇಹಲೋಕದ ನಾಯಕತ್ವದ ಮುಕ್ತಿ
35 ವರ್ಷಗಳ ಕಾಲ ಸ್ನೇಹ-ಪ್ರೀತಿ ತೋರಿ
ದೃಢತೆಯಿಂದ ಸ್ಪಷ್ಟ ಪಡಿಸಿದ್ದಿರಿ ನಮ್ಮ ಸಂಘ ಗುರಿ

ನಿಮ್ಮ ಪ್ರತಿ ಮಾತು ನಮಗೆ ದಾರಿದೀಪ
ನಮ್ಮ ಮನಸ್ಸಲ್ಲಿ ನಿಮಗಾಗಿ ಬೆಳಗುವುದು ತೂಗುದೀಪ
ನಿಮ್ಮೊಂದಿಗೆ ಕಳೆದ ಆ ಒಡನಾಟ
ಕಲಿತೇವು ಅನೇಕ ಹೊಸ-ಹೊಸ ಪಾಠ

ಬೆಳೆಯುವ ಯುವ ಸಂಘಟಕರಿಗೆ ದಿಕ್ಸೂಚಿ ನೀವು
ನಮ್ಮಯ ಅನೇಕರಿಗೆ ಗುರು-ಮಾರ್ಗದರ್ಶಕರು ತಾವು
ಅಚ್ಚಳಿಯದೆ ನಮ್ಮಲ್ಲಿ ಉಳಿದಿವೆ ನಿಮ್ಮಯ ಆದರ್ಶ
ಮರೆಯಲಾರೆವು ನಿಮ್ಮ ಸಾರ್ಥಕತೆಯ ಆತ್ಮೀಯ ಸ್ಪರ್ಶ

ಶ್ರದ್ಧೆ, ನಿಷ್ಠೆ, ಸಮಯಪಾಲನೆ, ವಿಧೇಯತೆಗಳೇ ತಮಗೆ ಭೂಷಣ
ರಾಷ್ಟ್ರಹಿತ, ಸಹಬಾಳ್ವೆ, ಯಾರನ್ನು ನೋಯಿಸದ ತಮ್ಮ ಗುಣಗಳೆ ಆಭರಣ
ರೂಢಿಸಿಕೊಳ್ಳಲು ಬಹಳಷ್ಟಿದೆ ತಮ್ಮ ನಿಷ್ಠೆ, ಸಮಯಪ್ರಜ್ಞೆ
ನಿಮ್ಮಂತೆಯೇ ನಾನಾಗುವೆ, ಇಗೋ ನನ್ನ ಭೀಷ್ಮ ಪ್ರತಿಜ್ಞೆ

ಬಂದ ಎಲ್ಲರನ್ನು ಬಿಗಿದಪ್ಪಿ ಬಂಧುವಾದಿರಿ
ತಂದ ಎಲ್ಲರನ್ನು ತೊಡಗಿಸಿಕೊಂಡು ತಂದೆಯಾದಿರಿ
ರಾಜ್ಯದ ಎಲ್ಲೆಡೆ ಸಂಚರಿಸಿ, ಕಾರ್ಯಕರ್ತರ ಜೀವನಾಡಿಯಾದಿರಿ
ಎಲ್ಲರಲ್ಲೂ ಅರಿತು-ಬೆರೆತು ನಮಗೆ ಅರಿಯದೆ
ಮರೆಯಲಾರದ ಮಾಣಿಕ್ಯವಾದಿರಿ

**ಚಂದ್ರಶೇಖರ ಪಾಟೀಲ್,** ಜಿಲ್ಲಾಧ್ಯಕ್ಷರು,
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ), ಕಲಬುರಗಿ ಘಟಕ.

# ಸಹೃದಯ ಮಾರ್ಗದರ್ಶಕ ಮಿತ್ರ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರಾಗಿದ್ದ ಶ್ರೀ ಜಿ.ಎಸ್.ಕೃಷ್ಣಮೂರ್ತಿಯವರ ನಿಧನ ಸಂಘಕ್ಕೆ ತುಂಬಲಾಗದ ನಷ್ಟವಾಗಿದೆ. ಅವರ ಸ್ಥಾನವನ್ನು ಅಷ್ಟೇ ಅರ್ಥಪೂರ್ಣವಾಗಿ, ಸಮರ್ಥವಾಗಿ, ನಿಷ್ಠಾವಂತರಾಗಿ, ಕಾರ್ಯನಿರ್ವಹಿಸಲು ಶಕ್ತರಾದ ಶಿಕ್ಷಕ ಕಾರ್ಯಕರ್ತರನ್ನು ಹುಡುಕುವುದು ಕಷ್ಟ.

ಉತ್ತಮ ಶಿಕ್ಷಕರಾಗಿ, ಕಾರ್ಯಕರ್ತರಾಗಿ, ಸಹೃದಯಿ ಸಂಘಟಕರಾಗಿ, ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದ, ಆಜೀವ ಪರ್ಯಂತ ಬ್ರಹ್ಮಚಾರಿಗಳಾಗಿಯೇ ಸೇವೆ ಸಲ್ಲಿಸಿದ ಶ್ರೀ ಜಿ. ಎಸ್. ಕೃಷ್ಣಮೂರ್ತಿಯವರ ಜೀವನ ನಮ್ಮೆಲ್ಲರಿಗೆ ಆದರ್ಶಪ್ರಾಯವಾಗಿದೆ. ಅವರೊಂದಿಗೆ ಪ್ರವಾಸದಲ್ಲಿ, ಕಾರ್ಯಕ್ರಮಗಳಲ್ಲಿ, ಕಾರ್ಯಾಲಯದಲ್ಲಿ ಪಡೆದ ಆತ್ಮೀಯ ಅನುಭವಗಳ ಸ್ಮರಣೆಯನ್ನು ಶಬ್ದಗಳಲ್ಲಿ ಹಿಡಿದಿಡಲಾರೆವು. ನಾನು ಎರಡು ಸಾರಿ ಶಿಕ್ಷಕ ಕ್ಷೇತ್ರದ ಚುನಾವಣೆಗೆ ನಿಂತಾಗ ಅವರು ನೀಡಿದ ಸಹಕಾರ ಮತ್ತು ಮಾರ್ಗದರ್ಶನಗಳನ್ನು ಮರೆಯಲಾರೆನು. ನಾನು ಬೆಂಗಳೂರಿಗೆ ಬಂದಾಗಲೆಲ್ಲಾ ಅವರೊಂದಿಗೆ ಹೋಟೆಲ್‌ನಲ್ಲಿ ಉಪಹಾರ ಮುಗಿಸಿ, ಕಾರ್ಯಾಲಯದಲ್ಲಿ ಕುಳಿತು ಅವರ ಆರೋಗ್ಯದ ಬಗ್ಗೆ, ಇತ್ತೀಚಿನ ಅನುಭವಗಳ ಬಗ್ಗೆ, ಸಂಘದ ಪ್ರಸಕ್ತ ಪರಿಸ್ಥಿತಿಗಳ ಬಗ್ಗೆ ಬಹಳ ಕಾಲ ಮಾತು, ಹರಟೆ, ಚರ್ಚೆ ನಡೆಸುತ್ತಿದ್ದೆವು. ಅವರ ಕೆಮ್ಮು ಬೆಂಗಳೂರಿನ ಕಲುಷಿತ ವಾತಾವರಣದ ಕೊಡುಗೆ. ಒಮ್ಮೆ ನಮ್ಮೂರಿಗೆ ಬಂದಾಗ 3-4 ದಿನ ಉಳಿದಿದ್ದರು. ಅಗ ಕೆಮ್ಮಿನ ತೊಂದರೆ ಕಡಿಮೆಯಾಗಿತ್ತು. ಆಗ ಅವರು "ಒಮ್ಮೆ ನಿಮ್ಮೂರಿಗೆ ಬಂದು ಒಂದು ತಿಂಗಳು ಉಳಿದುಕೊಳ್ಳುತ್ತೇನೆ" ಎಂದಿದ್ದರು. ಬಂದಾಗಲೆಲ್ಲಾ ನಾನು ಕರೆಯುತ್ತಲೇ ಇದ್ದೆ. ಅವರು "ಬರುತ್ತೇನೆ" ಎನ್ನುತ್ತಲೇ ಇದ್ದರು. ಬರಲೇ ಇಲ್ಲ. ಅವರ ನಿಧನದಿಂದ ನಾನು ಒಬ್ಬ ಸಹೃದಯಿ ಮಾರ್ಗದರ್ಶಕ ಮಿತ್ರನನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಆ ದಯಾಮಯನಾದ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**ಶ್ರೀ ಟಿ. ರಾಜಶೇಖರ,** ಶಿರಾಳಕೊಪ್ಪ, ಮಾಜಿ ಪ್ರಧಾನಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ

ವಿರೋಧ, ವೈಷಮ್ಯ, ವಕ್ರತೆಗಳು ಜೀವನದ ಆಂತರಿಕ ಅರ್ಥವನ್ನು ಹೊರಹೊಮ್ಮಿಸುತ್ತಿವೆ - ಕವೀಂದ್ರ ರವೀಂದ್ರರು.

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ

ಜೆ. ಎಂ. ಜೋಶಿ
ರಾಜ್ಯ ಕೋಶಾಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



ಶೃಂಗೇರಿ ಪ್ರತಿ ಭಾರತೀಯನಿಗೂ ಪವಿತ್ರವಾದ ಕ್ಷೇತ್ರ. ಸನಾತನ ಧರ್ಮದ ಪುನರುಜ್ಜೀವನಕ್ಕೆ ಕಾರಣರಾದ ಮಹಾತ್ಮರ ನೆಲೆವೀಡು ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಶೃಂಗೇರಿ ಪ್ರಾಚೀನ ಪುಣ್ಯಕ್ಷೇತ್ರ.

ಶೃಂಗೇರಿಯು ಕಶ್ಯಪರ ಮಗ ವಿಭಾಂಡಕ ಮಹರ್ಷಿಗಳ ತಪೋಭೂಮಿ. ವಿಭಾಂಡಕರ ಮಗ ಋಷ್ಯಶೃಂಗ. ಋಷ್ಯಶೃಂಗರಿಂದಾಗಿ ಈ ಕ್ಷೇತ್ರವು ಋಷ್ಯಶೃಂಗಗಿರಿ. ಶೃಂಗಪುರ, ಶೃಂಗಗಿರಿ, ಶೃಂಗೇರಿ ಆಯಿತು. ದೇಶಧರ್ಮಗಳ ಮತ್ತು ರಾಷ್ಟ್ರದ ಏಕಾತ್ಮತೆಯ ರಕ್ಷಣೆಗಾಗಿ ಧರ್ಮಪೀಠಗಳನ್ನು ಸ್ಥಾಪಿಸಲು ಶ್ರೀಶಂಕರರು ನಿಶ್ಚಯಿಸಿದರು. ಅವರ ಕಲ್ಪನೆಯಂತೆ ಪೂರ್ವದಲ್ಲಿ ಋಗ್ವೇದ ಅಧ್ಯಯನದ ಪುರಿಪೀಠ, ದಕ್ಷಿಣದಲ್ಲಿ ಯಜುರ್ವೇದದ ಶೃಂಗೇರಿ ಪೀಠ, ಪಶ್ಚಿಮದಲ್ಲಿ ಸಾಮವೇದದ ದ್ವಾರಕಾಪೀಠ ಮತ್ತು ಉತ್ತರದಲ್ಲಿ ಅಥರ್ವವೇದದ ಬದರೀಪೀಠ. ಇವುಗಳಲ್ಲಿ ಶ್ರೀಶಂಕರರು ಮೊದಲು ಸ್ಥಾಪಿಸಿದ್ದು ಶೃಂಗೇರಿಯ ಶಾರದಾ ಪೀಠ. ಶ್ರೀ ಶಂಕರರ ದಕ್ಷಿಣಾಮ್ನಾಯ ಅದ್ವೈತ ಪೀಠದಿಂದಾಗಿ ಕ್ರಿ.ಶ 8ನೇ ಶತಮಾನದಿಂದ ಈ ನಗರವು ಇನ್ನಷ್ಟು ಪವಿತ್ರ ಮತ್ತು ಪ್ರಸಿದ್ಧವಾಯಿತು.

ಶ್ರೀ ಶಂಕರರು ತುಂಗಾತೀರದ ಕಲ್ಲುಬಂಡೆಯ ಮೇಲೆ ಶ್ರೀ ಚಕ್ರವನ್ನು ಬರೆದು ಪೂಜಿಸಿ ಶಾರದೆಯನ್ನು ಪ್ರತಿಷ್ಠಾಪಿಸಿದರು. ಪೀಠದ ರಕ್ಷಣೆಗಾಗಿ ಪೂರ್ವದಲ್ಲಿ ಕಾಲಭೈರವ, ದಕ್ಷಿಣದಲ್ಲಿ ದುರ್ಗಾ, ಪಶ್ಚಿಮದಲ್ಲಿ ಆಂಜನೇಯ ಮತ್ತು ಉತ್ತರದಲ್ಲಿ ಮಹಾಕಾಳಿಯನ್ನು ಸ್ಥಾಪಿಸಿದರು. ಶಂಕರ ಭಗವತ್ಪಾದರು ಶೃಂಗೇರಿ ಪೀಠದಲ್ಲಿ ಹತ್ತು ವರ್ಷಗಳಷ್ಟು ಕಾಲ ಇದ್ದು ಶಿಷ್ಯರಿಗೆ ಮಾರ್ಗದರ್ಶನ ಮಾಡಿದರು.

ಭರತಖಂಡದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಸೂರ್ಯನಂತೆ ಪ್ರಜ್ವಲಿಸಿದ ಶಂಕರಭಗವತ್ಪಾದರ ಕಾರ್ಯಕ್ಷೇತ್ರ ಶೃಂಗೇರಿಯನ್ನು ಎಷ್ಟು ನೆನೆದರೂ ಸಾಲದು. ಪ್ರತಿಯೊಬ್ಬ ಭಾರತೀಯನು ಕನಿಷ್ಠ ಒಂದು ಬಾರಿಯಾದರೂ ಶೃಂಗೇರಿ ಶಾರದಾಂಬೆಯ ದರ್ಶನ ಪಡೆದರೆ ಜೀವನ ಪಾವನವಾದೀತು.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಯಾವುದಾಗಿತ್ತು?
2. ಬಸವೇಶ್ವರರ ಜನ್ಮಸ್ಥಳ ಯಾವುದು?
3. ಭಾರತದ ಸಂವಿಧಾನ ಶಿಲ್ಪಿ ಎಂದು ಯಾರನ್ನು ಕರೆಯುವರು?
4. ಭಾರತ ರತ್ನ ಪ್ರಶಸ್ತಿಯನ್ನು ಪಡೆದ ಮೊದಲ ಕನ್ನಡಿಗರು ಯಾರು?
5. ರಾವಣನು ಕೈಲಾಸದಿಂದ ತಂದ ಆತ್ಮಲಿಂಗ ಯಾವ ಊರಿನಲ್ಲಿದೆ?

## ಜ್ಞಾನ ವಿಜ್ಞಾನ

1. ಕನ್ನಡನಾಡಿನ ಜೀವನದಿಯ ಹೆಸರೇನು?
2. ಕಂಠೀರವ ಕ್ರೀಡಾಂಗಣ ಎಲ್ಲಿದೆ?
3. ರಾಯಚೂರು ಜಿಲ್ಲೆಯ ಹಟ್ಟಿಗಣಿಯಲ್ಲಿ ದೊರೆಯುವ ಲೋಹ ಯಾವುದು?
4. ಭಾರತದ ಮೊಟ್ಟ ಮೊದಲ ಗಣಿತ ಪಂಡಿತ ಯಾರು?
5. ಔಷಧ ವಿಜ್ಞಾನದ ಜನಕ ಎಂದು ಯಾರನ್ನು ಕರೆಯುವರು?

## ಆಗಸ್ಟ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಬಾಲ ಗಂಗಾಧರ ತಿಲಕ್
2. ಡಾ॥ ಬಾಬು ರಾಜೇಂದ್ರ ಪ್ರಸಾದ್
3. ಪ್ರಜಾಪ್ರಭುತ್ವ
4. ಚಾಪೇಕರ್ ಸಹೋದರರು
5. ಸರದಾರ್ ವಲ್ಲಭಭಾಯಿ ಪಟೇಲ್

**ಜ್ಞಾನ–ವಿಜ್ಞಾನ – ಉತ್ತರಗಳು**

1. ಕರ್ನಾಟಕ
2. ಉಡುಪಿ
3. ಸುಶ್ರುತ
4. ಬೋಧಾಯನ
5. ಆಯುರ್ವೇದ

## ಕೃಷ್ಣಮೂರ್ತಿಯವರು ಒಬ್ಬ ತಪಸ್ವಿ

**ಶ್ರೀ ಮಹೇಂದ್ರಕಪೂರ್‌ಜೀ**
**ಸಂಘಟನಾ ಮಂತ್ರಿ, ಅ.ಭಾ.ರಾ.ಶೈ.ಸಂಘ**

ಕೃಷ್ಣಮೂರ್ತಿಯವರು ತಮ್ಮ ಶಿಕ್ಷಕ ಜೀವನದಲ್ಲಿ ಕುಶಲ ಶಿಕ್ಷಕರಾಗಿ, ಸಂಘಟನೆಯಲ್ಲಿ ಹನುಮಂತನ ರೂಪದಲ್ಲಿ ಸದಾ ತತ್ಪರರಾಗಿ, ಸಕ್ರಿಯರಾಗಿದ್ದು ತಮ್ಮ ಪಾತ್ರವನ್ನು ನಿರ್ವಹಿಸಿದರು. ಅವರು ರಾಜ್ಯ ಮತ್ತು ಅಖಿಲ ಭಾರತೀಯ ಮಟ್ಟದಲ್ಲಿ ವಿಭಿನ್ನ ದಾಯಿತ್ವಗಳನ್ನು ನಿರ್ವಹಿಸಿದ್ದು, ಒಬ್ಬ ತಪಸ್ವಿಯಾಗಿದ್ದರು. ಶಿಕ್ಷಕ ವೃತ್ತಿಯಿಂದ ನಿವೃತ್ತಿ ಪಡೆದ ನಂತರ ಸಂಘದ ಕಾರ್ಯದಲ್ಲೇ ಇದ್ದು ಉತ್ತಮ ಸಂಘಟನೆಯನ್ನು ತಮ್ಮ ಅಂತಿಮ ಕ್ಷಣದವರೆಗೂ ಮಾಡಿದರು. ಕೇವಲ ಸಂಘಟನೆಗೆ ತಮ್ಮ ಜೀವನವನ್ನೇ ಅರ್ಪಿಸುವ ಕಾರ್ಯಕರ್ತರು ಸಿಗುವುದು ಕಷ್ಟಸಾಧ್ಯ. ಭಗವಂತ ತಮ್ಮ ಪಾದಕಮಲದಲ್ಲಿ ಅವರಿಗೆ ಸ್ಥಾನ ನೀಡಲಿ ಎಂದು ಬೇಡುತ್ತೇನೆ.

## ಕ.ರಾ.ಮಾ.ಶಿ.ಸಂಘದ ಆಧಾರಸ್ತಂಭ – ಕೃಷ್ಣಮೂರ್ತಿ ಸರ್

**ಶ್ರೀ ಅರುಣ್ ಶಹಾಪುರ್**
**ವಿಧಾನ ಪರಿಷತ್ ಸದಸ್ಯರು**

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಆಧಾರಸ್ತಂಭಗಳಲ್ಲಿ ಒಬ್ಬರಾಗಿದ್ದವರು ಕೃಷ್ಣಮೂರ್ತಿ ಸರ್‌ರವರು. ಅವರು ಅವಿವಾಹಿತರಾಗಿದ್ದುಕೊಂಡು ತಮ್ಮೆಲ್ಲಾ ಜೀವನವನ್ನು ಸಂಘಟನೆಗಾಗಿ ಅರ್ಪಿಸಿಕೊಂಡಿರುವುದು ನಮ್ಮೆಲ್ಲರಿಗೂ ಪ್ರೇರಣಾದಾಯಕ. ವಿಶೇಷವಾಗಿ ಸನ್ಮಾನ್ಯ ಶ್ರೀ ಕೃ ನರಹರಿಯವರು ವಿಧಾನಪರಿಷತ್ ಸದಸ್ಯರಾಗಿರುವಂತಹ ಸಂದರ್ಭದಲ್ಲಿ, ಅವರೊಟ್ಟಿಗೆ ಸಂಘಟನೆಯಾಗಿ ಅದರ ಜೊತೆಗೆ ಸರ್ಕಾರದಲ್ಲೂ ಕೂಡ ಶಿಕ್ಷಕರ ಸಮಸ್ಯೆಗಳಿಗಾಗಿ ಅವರು ಪಟ್ಟಿರುವ ಶ್ರಮ ಅಪಾರವಾದುದು. ಅವರ ಬಗ್ಗೆ ಒಂದು ವಿಶೇಷತೆ ಹೇಳಬೇಕೆಂದರೆ ಅವರು ಎಲ್ಲಾ ಸಭೆಗಳಲ್ಲಿ ಸುಮ್ಮನೆ ಕುಳಿತುಕೊಂಡು ನಿರ್ಣಾಯಕ ಹಂತಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರು. ಅವರ ಅಭಿಪ್ರಾಯಗಳು ನಿರ್ಣಯ ಪ್ರಕ್ರಿಯೆಗಳಿಗೆ ತುಂಬಾ ಸಹಾಯಕವಾಗಿರುತ್ತಿದ್ದವು. ಮೌನವಾಗಿದ್ದುಕೊಂಡೇ ಸಂಘಟನೆಯ ಎಲ್ಲಾ ನಿರ್ಣಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಅಂತಹ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿರುವುದು ಒಂದು ಅಗಾಧವಾಗಿರುವಂತಹ ಹಾನಿಯನ್ನು ಹಾಗೂ ಕೊರತೆಯನ್ನು ಸಂಘಟನೆಗೂ ಉಂಟು ಮಾಡಿದೆ ಮತ್ತು ಶಿಕ್ಷಕರ ಚಳುವಳಿಯಲ್ಲೂ ಉಂಟು ಮಾಡಿದೆ.

ವ್ಯಕ್ತಿಗಳ ವಿಶ್ಲೇಷಣೆಯ ವಿಷಯ ಬಂದಾಗ ಕೃಷ್ಣಮೂರ್ತಿಗಳ ಪಾತ್ರ ಬಹಳವಾಗಿರುತ್ತಿತ್ತು. ಎಷ್ಟೇ ದೊಡ್ಡ ವ್ಯಕ್ತಿಗಳನ್ನು ಸೂಕ್ಷ್ಮವಾಗಿ ತಿದ್ದುವಾಗ ಅವರಲ್ಲಿ ನಿಷ್ಠೂರತೆ ಇದ್ದರೂ ಕೂಡ ಅದರ ಜೊತೆ ನಯವೂ ಇರುತ್ತಿತ್ತು. ಅವರು ನಮ್ಮನ್ನಗಲಿರುವುದು ಮುಂದಿನ ದಿನಗಳಲ್ಲಿ ಪ್ರತಿ ಹಂತದಲ್ಲಿಯೂ, ಪ್ರತಿ ಹೆಜ್ಜೆಯಲ್ಲಿಯೂ ಒಂದು ಕೊರತೆಯನ್ನು ಸಂಘಟನೆಗೆ ಉಂಟು ಮಾಡಲಿದೆ. ಭಗವಂತ ಅವರ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಎಂದು ಬೇಡಿಕೊಳ್ಳುತ್ತೇನೆ.

## ಕರ್ಮಯೋಗಿ ಶ್ರೀ ಕೃಷ್ಣಮೂರ್ತಿ

**ಶ್ರೀ ಸಂದೀಪ್ ಬೂದಿಹಾಳ್**
**ಅಧ್ಯಕ್ಷರು, ಕರ್ನಾಟಕ ರಾಜ್ಯಮಾಧ್ಯಮಿಕ ಶಿಕ್ಷಕ ಸಂಘ**

1984 ರಿಂದ ಸಂಘದ ಕಾರ್ಯಕರ್ತರಾಗಿ ಕಾರ್ಯ ಆರಂಭಿಸಿದರು. ಎಚ್ ಎ ಎಲ್ ಹೈಸ್ಕೂಲ್‌ನಲ್ಲಿ ಉತ್ತಮ ಗಣಿತ ಶಿಕ್ಷಕರಾಗಿ ನಿವೃತ್ತರಾದ ಇವರು ವಿದ್ಯಾರ್ಥಿಗಳಿಂದ ಅಧ್ಯಾಪಕ ವರ್ಗದಿಂದ ಅಪಾರ ಪ್ರೀತಿ ವಿಶ್ವಾಸ ಗಳಿಸಿದ್ದರು. 1988 ರಿಂದ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರಾಗಿ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದರು. ಕಾರ್ಯಾಲಯದ ಕಾರ್ಯದರ್ಶಿಯಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವಿವಿಧ ಜಿಲ್ಲೆಗಳಿಂದ ಆಗಮಿಸುವ ಎಲ್ಲಾ ಶಿಕ್ಷಕರನ್ನು ಹಾಗೂ ಕಾರ್ಯಕರ್ತರನ್ನು ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದರು.

ವಿಧಾನಪರಿಷತ್ ಚುನಾವಣೆಯಲ್ಲಿ ಶಿಕ್ಷಕ ಸಂಘದ ಅಭ್ಯರ್ಥಿಗಳ ಪರವಾಗಿ ಅವಿರತ ಸೇವೆ ಸಲ್ಲಿಸಿದ್ದಾರೆ. ಎಂದೂ ಸಹ ಸಂಘದ ಯಾವುದೇ ಹುದ್ದೆಗಳನ್ನು ಅಪೇಕ್ಷಿಸದೆ, ಸದಾ ನಿರಪೇಕ್ಷ ಭಾವದಿಂದ ಸೇವೆ ಸಲ್ಲಿಸಿದ್ದರು. ಸದಾಕಾಲ ನೇರ, ಶುದ್ಧ, ಸರಳ ನಡೆ–ನುಡಿಗಳಿಂದ ಎಲ್ಲರಿಗೂ ಪ್ರೀತಿ ಪಾತ್ರರಾದ ಇವರು ವೈಚಾರಿಕವಾಗಿ ಅತ್ಯಂತ ಪ್ರಬಲ ರಾಷ್ಟ್ರವಾದಿಗಳಾಗಿದ್ದರು. ಸಚ್ಚಾರಿತ್ರ್ಯದ ವಿಷಯದಲ್ಲಿ ಎಂದು ರಾಜಿ ಮಾಡಿಕೊಂಡವರಲ್ಲ ಅವರು. ಸೌಜನ್ಯದಿಂದ ಎಲ್ಲರ ಹೃದಯವನ್ನು ಗೆದ್ದ ಅತ್ಯಂತ ಸರಳ ಜೀವಿ. ಕಾರ್ಯನಿಷ್ಠೆ, ಸೇವಾಮನೋಭಾವ ಮತ್ತು ಶಿಸ್ತುಬದ್ಧ ಜೀವನ ಇವರದಾಗಿತ್ತು.

## ತಿಳಿಹೇಳುವ ಹಿರಿಯ ಮುತ್ಸದ್ದಿಯಾಗಿದ್ದರು ಜಿಎಸ್‌ಕೆ

**ಶ್ರೀಮತಿ ವಾಸುಕಿ**
**ರಾಜ್ಯ ಮಹಿಳಾ ಪ್ರಮುಖ್, ಕೆಆರ್‌ಎಂಎಸ್‌ಎಸ್**

ಜಿಎಸ್‌ಕೆ ಸರ್....... ಎಂದೊಡನೆ ಸದಾ ನಗುಮೊಗದ, ಹೆಚ್ಚು ಮಾತಿಲ್ಲದ, ಮೌನವಾಗಿ ಎಲ್ಲವನ್ನೂ ಗಮನಿಸುವ ಮನೆಯ ಒಬ್ಬ ಹಿರಿಯ ಯಜಮಾನ. ಅವರಿಲ್ಲದ ಯಾದವಸ್ಮೃತಿಯನ್ನು ಕಲ್ಪಿಸಿಕೊಳ್ಳಲೇ ಆಗುತ್ತಿಲ್ಲ. ಹಿರಿಯರೊಡನೆ ಸಂಘದ ಬಗ್ಗೆ ಚರ್ಚೆ ಮಾಡುತ್ತಾ, ಸದಾ ಸಂಘದ ಹಿತಕ್ಕಾಗಿ, ಒಗ್ಗಟ್ಟಿಗಾಗಿ ಶ್ರಮಿಸುವ ಹಿರಿಯ ಜೀವ. ಚಿಕ್ಕವರು ತಪ್ಪು ಮಾಡಿದಾಗ ಮೃದುವಾಗಿ ಅವರಿಗೆ ತಿಳಿಹೇಳುವ ಹಿರಿಯ ಮುತ್ಸದ್ದಿ. ಅವರನ್ನು ಕಳೆದುಕೊಂಡು ನಾವೆಲ್ಲ ಅನಾಥರಾಗಿದ್ದೇವೆ. ಅವರ ಆತ್ಮಕ್ಕೆ ಶಾಂತಿ ನೀಡುವ ಸಲುವಾಗಿ ನಾವೆಲ್ಲರೂ ಸಂಘದ ಕಾರ್ಯಗಳನ್ನು ನಿಷ್ಠೆಯಿಂದ ಮಾಡುವುದು ನಾವು ಅವರಿಗೆ ಸಲ್ಲಿಸಬಹುದಾದ ಅಂತಿಮ ನಮನ.

## ಎಲೆ ಮರೆ ಕಾಯಿ – ಕೃಷ್ಣಮೂರ್ತಿ ಸರ್

**ಶ್ರೀ ತಿಪ್ಪೇಸ್ವಾಮಿ ಜೀ**
**ಮಧ್ಯ ಕ್ಷೇತ್ರಿಯ ಕಾರ್ಯವಾಹ, ರಾಷ್ಟ್ರೀಯ ಸ್ವಯಂಸೇವಕ ಸಂಘ**

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಲ್ಲಿ ಎಲೆ ಮರೆ ಕಾಯಿಯಂತೆ ಇದ್ದವರು ಜಿ.ಎಸ್.ಕೃಷ್ಣಮೂರ್ತಿಯವರು. ಸಂಘಟನೆಯ ಪ್ರಮುಖ ಕಾರ್ಯಕರ್ತರಾಗಿದ್ದರೂ ಎಲ್ಲಿಯೂ ಪ್ರಚಾರ ಬಯಸದ ವ್ಯಕ್ತಿಗಳಾಗಿದ್ದರು ಅವರು. ನಾನು ಭಾಗವಹಿಸಿದ್ದ ಯಾವುದೇ ಬೈಠಕ್‌ಗಳಲ್ಲಿ ಅವರನ್ನು ವೇದಿಕೆಯ ಮೇಲೆ ಎಂದಿಗೂ ನಾನು ನೋಡಿಲ್ಲ. ಆದರೆ ಸಂಘಟನೆಯ ಎಲ್ಲಾ ಪ್ರಮುಖ ನಿರ್ಣಯಗಳಲ್ಲಿ ಕೃಷ್ಣಮೂರ್ತಿಗಳ ಅಭಿಪ್ರಾಯವಿರುತ್ತಿತ್ತೆಂದು ನನಗೆ ಗೊತ್ತಿತ್ತು. ಇಂತಹ ಒಬ್ಬ ನಿಷ್ಕಾಮ ಕರ್ಮಿಯೋರ್ವರನ್ನು ಕಳೆದುಕೊಂಡಿರುವುದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ತುಂಬಲಾರದ ನಷ್ಟವಾಗಿದೆ. ಆ ಭಗವಂತ ಆತ್ಮಕ್ಕೆ ಸದ್ಗತಿ ನೀಡಲೆಂದು ಪ್ರಾರ್ಥನೆ.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-09-2021 Date of Posting 20th or 21st of every month Posted at Periodical Rate

# ಜಿಎಸ್‌ಕೆ ಅವರ ಅಪರೂಪದ ಚಿತ್ರಪಟಗಳು



IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com